ರೇಷ್ಮೆ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ

ಡಾ॥ ಹೆಚ್. ಪಿ. ಪುಟ್ಟರಾಜು

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ರೇಷ್ಮೆಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ

ಡಾ॥ ಹೆಚ್. ಪಿ. ಪುಟ್ಟರಾಜು

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

RESHMEKRUSHI HAAGU GRAMINABI-VRUDHI by Dr. H. P. Puttaraju, Dept. of Sericulture, Bangalore University, Bangalore-56. Published by Prasaranga, Bangalore University, Bangalore-560 056. **Pp 48+viii**

ಪ್ರಕಾಶಕರು :
ಹೆಚ್. ಆಂಜನಪ್ಪ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056

ಬೆಲೆ : ರೂ. 5–00

ಮುದ್ರಕರು :
ಎಸ್. ಎಂ. ಹೊನ್ನಪ್ಪ
ನಿರ್ದೇಶಕರು (ಕಾರ್ಯನಿರ್ವಾಹಕ)
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ,
ಬೆಂಗಳೂರು–560 056

ಮುನ್ನುಡಿ

ಜ್ಞಾನಕ್ಕಿಂತ ಮಿಗಿಲಾದದು ಜಗತ್ತಿನಲ್ಲಿ ಯಾವುದೂ ಇಲ್ಲ. ಜ್ಞಾನಪ್ರಸಾರಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುವ ಕಾರ್ಯವೂ ಒಂದು. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಹಾಗೂ ವಿವಿಧ ವೇದಿಕೆಗಳಲ್ಲಿ ಇಂತಹ ಉಪನ್ಯಾಸಗಳನ್ನು ಹಲವಾರು ಸಂಘ, ಸಂಸ್ಥೆಗಳ, ಸಹಯೋಗ–ಸಹಕಾರದೊಡನೆ ಪ್ರಸಾರಾಂಗವು ನಡೆಸಿಕೊಂಡು ಬರುತ್ತಿದೆ. ಖ್ಯಾತ ವಿದ್ವಾಂಸರು, ಕಾಲೇಜಿನ ಪ್ರಾಧ್ಯಾಪಕರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅಮೋಘ ಸೇವೆ ಸಲ್ಲಿಸುತ್ತಿರುವ ಪರಿಣಿತರಿಂದ ಇಂತಹ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಜ್ಞಾನಜ್ಯೋತಿಯನ್ನು ಎಲ್ಲೆಡೆ ಪ್ರಸರಿಸುವ ಕೈಂಕರ್ಯವನ್ನು ಕೈಗೊಂಡಿರುವ ಪ್ರಸಾರಾಂಗದ ಶ್ರಮವು ಶ್ಲಾಘನೀಯ. ಇದಕ್ಕಾಗಿ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಹೆಚ್. ಆಂಜನಪ್ಪ ಅವರನ್ನು ಅಭಿನಂದಿಸುತ್ತೇನೆ.

'ರೇಷ್ಮೆಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ' ಎಂಬ ವಿಷಯದ ಬಗ್ಗೆ ಡಾ|| ಹೆಚ್. ಪಿ. ಪುಟ್ಟರಾಜು ಅವರು ಬಹಳ ಆಳವಾಗಿ ಅಭ್ಯಾಸಮಾಡಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತವಾದ

ಮಾಹಿತಿಯನ್ನು ಅವರ ಉಪನ್ಯಾಸದಲ್ಲಿ ಕೊಟ್ಟಿದ್ದಾರೆ. ಇದು ನಾಡಿನ ಎಲ್ಲೆಡೆ ತಲುಪಲಿ ಎಂಬ ಉದ್ದೇಶದಿಂದ ಇದರ ಪ್ರಕಟಣೆಯನ್ನು ಕೈಗೊಳ್ಳಲಾಗಿದೆ. ಈ ಬಗ್ಗೆ ನನ್ನ ಅಭಿನಂದನೆಗಳು ಡಾ॥ ಹೆಚ್. ಪಿ. ಪುಟ್ಟರಾಜು ಅವರಿಗೆ ಸಲ್ಲಬೇಕು. ಈ ಚಿಕ್ಕ ಪುಸ್ತಕವನ್ನು ಚೊಕ್ಕಟವಾಗಿ ಮುದ್ರಿಸಿಕೊಟ್ಟಿರುವ ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಎಸ್. ಎಂ. ಹೊನ್ನಪ್ಪ ಅವರಿಗೂ ಹಾಗೂ ಅವರ ಸಿಬ್ಬಂದಿ ವರ್ಗದವರಿಗೂ ನನ್ನ ಮೆಚ್ಚಿಗೆ ಸಲ್ಲಬೇಕು.

ಡಾ॥ ಎನ್. ಆರ್. ಶೆಟ್ಟಿ
ಕುಲಪತಿ

ಪ್ರಕಾಶಕರ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಹಮ್ಮಿಕೊಳ್ಳಲಾದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಡಾ॥ ಹೆಚ್. ಪಿ. ಪುಟ್ಟರಾಜು ಅವರಿಂದ ರೇಷ್ಮೆಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಎಂಬ ವಿಷಯದ ಬಗ್ಗೆ ಒಂದು ಪ್ರಚಾರೋಪನ್ಯಾಸವನ್ನು ಏರ್ಪಡಿಸಲಾಗಿತ್ತು. ಅವರ ಉಪನ್ಯಾಸವನ್ನು ಜನ ಸಾಮಾನ್ಯರಿಗೆ ತಲುಪಿಸುವ ಸಲುವಾಗಿ ಈ ಕಿರು ಹೊತ್ತಿಗೆ ರೂಪದಲ್ಲಿ ಪ್ರಕಟಿಸಲಾಗಿದೆ. ಮುನ್ನುಡಿ ಬರೆದು ಕೊಟ್ಟ ಮಾನ್ಯ ಕುಲಪತಿ ಡಾ॥ ಎನ್. ಆರ್. ಶೆಟ್ಟಿ ಅವರಿಗೆ ನಾನು ಆಭಾರಿ. ಈ ನಿಟ್ಟಿನಲ್ಲಿ ಸಹಕರಿಸಿದ ಪ್ರಸಾರಾಂಗದ ಸಹೋದ್ಯೋಗಿಗಳು ಮತ್ತು ವಿಶ್ವ ವಿದ್ಯಾಲಯ ಮುದ್ರಣಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಎಸ್. ಎಂ. ಹೊನ್ನಪ್ಪನವರಿಗೂ ಹಾಗೂ ಸಿಬ್ಬಂದಿಗೂ ನನ್ನ ವಂದನೆಗಳು.

ಹೆಚ್. ಆಂಜನಪ್ಪ
ನಿರ್ದೇಶಕ

ಲೇಖಕರ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ವತಿಯಿಂದ ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ನೀಡಿದ್ದ ಪ್ರಚಾರೋಪನ್ಯಾಸದ ಪುಸ್ತಕ ರೂಪವೇ "ರೇಷ್ಮೆಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ". ಭಾರತದ ಗ್ರಾಮೀಣ ಜನತೆಯ ಬೆನ್ನೆಲುಬಾಗಿರುವ ಕೃಷಿ ಅದರಲ್ಲೂ ರೇಷ್ಮೆಕೃಷಿ ರಾಷ್ಟ್ರದ ಬಹುತೇಕ ಬಡಜನರ ಮುಖ್ಯ ವಾಣಿಜ್ಯ ಬೆಳೆಯಾಗಿದ್ದು ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದೆ. ಬಂಗಾರದಂತ ಆಡಂಬರದ ಈ ರೇಷ್ಮೆ ಎಲ್ಲರ ಅದರಲ್ಲೂ ಮಹಿಳೆಯರ ಮನಸೆಳೆದು ರಾಷ್ಟ್ರದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.

ಕನ್ನಡದಲ್ಲಿ ರೇಷ್ಮೆಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲವಾಗಿದ್ದು; ಪ್ರಸ್ತುತ ಪುಸ್ತಕವನ್ನು ರೇಷ್ಮೆ ಕೃಷಿಯ ಮಹತ್ವದ ಬಗ್ಗೆ ಗ್ರಾಮೀಣ ಜನತೆಗೆ ಅರಿವುಂಟುಮಾಡಿ ಈ ಕಸುಬನ್ನು ಕೈಗೊಂಡು ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ನೆರವಾಗುವಂತೆ ರಚಿಸಲಾಗಿದೆ.

ಈ ಪುಸ್ತಕ ಹೊರತರಲು ಸಹಕರಿಸಿದ ಶ್ರೀ ಆರ್. ಚಿಕ್ಕ ಕೇಶವಮೂರ್ತಿ, ಎಂ.ಎಸ್ಸಿ, ಎಂ.ಫಿಲ್., ರೇಷ್ಮೆ ಕೃಷಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ನನ್ನ ಆತ್ಮೀಯ ಧನ್ಯವಾದಗಳು.

ಈ ಪುಸ್ತಕವನ್ನು ಮುದ್ರಿಸಿ, ಪ್ರಕಾಶಿಸಲು ನೆರವಾದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಹಾಗೂ ಮುದ್ರಣಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು.

ಹೆಚ್. ಟಿ. ಪುಟ್ಟರಾಜು

ರೇಷ್ಮೆಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ

ಡಾ॥ ಹೆಚ್. ಪಿ. ಪುಟ್ಟರಾಜು

ನಮ್ಮ ಭಾರತ ದೇಶದಲ್ಲಿ ಸುಮಾರು 6,29,413 ಕ್ಕೂ ಹೆಚ್ಚು ಹಳ್ಳಿಗಳಿದ್ದು, ಸರಾಸರಿ 650 ರಷ್ಟು ಜನ ಸಂಖ್ಯೆಯನ್ನು ಹೊಂದಿದೆ. ಈ ಜನಸಂಖ್ಯಾ ಸಾಂದ್ರತೆಯಿಂದಾಗಿ ರಾಷ್ಟ್ರಕ್ಕೆ ಉದ್ಯೋಗ ಕಲ್ಪಿಸುವಿಕೆ ಹಾಗೂ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವಿಕೆ ಇವು ದೇಶದ ಅಭಿವೃದ್ಧಿಗೆ ಕಾರಣವಾಗಬೇಕಾಗಿದೆ. ಭಾರತವು ಹೇರಳವಾದ ಸಂಪನ್ಮೂಲಗಳನ್ನು ಹೊಂದಿದ್ದರೂ ಸಹ ಹೆಚ್ಚು ಬಂಡವಾಳ ಹೂಡಿಕೆ ಮತ್ತು ಪರಿವರ್ತನೆ ಬೆಲೆಯು ಯಶಸ್ವಿಯಾಗಲು ತಡೆಯುತ್ತಿರುವ ಕಾರಣ, ಕಡಿಮೆ ಬಂಡವಾಳ ಹೂಡಿಕೆಯ ಉದ್ಯಮ ಕ್ಷೇತ್ರಗಳಿಗೆ ಹೆಚ್ಚು ಪ್ರಚೋದನೆ ನೀಡಬೇಕಾಗಿದೆ. ಅಲ್ಲದೆ ದೇಶದ ಆರ್ಥಿಕ ಅಭಿವೃದ್ಧಿಗೆ ವ್ಯವಸಾಯವೇ "ಬೆನ್ನೆಲುಬು" ಆಗಿದೆ.

ಅಭಿವೃದ್ಧಿ ಹೊಂದುತ್ತಿರುವ ದೇಶವಾದ ಭಾರತದಲ್ಲಿ ಹೆಚ್ಚಿನ ಕಾರ್ಮಿಕರಿದ್ದು ಅವರಲ್ಲಿ ಸುಮಾರು ಶೇಕಡ 12 ರಷ್ಟು ಮಂದಿ ಮಾತ್ರ ಕೃಷಿಯೇತರ ಉಪಕಸುಬನ್ನು ಹೊಂದಿದ್ದು ಉಳಿದ ಶೇಕಡ 80 ರಷ್ಟು ಮಂದಿಗೆ

ಯಾವುದೇ ಉಪಕಸುಬಿಲ್ಲವಾಗಿದೆ. ಇದರಿಂದ ನಮ್ಮ ರಾಷ್ಟ್ರದಲ್ಲಿ ಹೇರಳವಾದ ಮಾನವ ಸಂಪನ್ಮೂಲ ದೊರೆಯುತ್ತದೆ ಎಂದು ನಮಗೆ ತಿಳಿಯುತ್ತದೆ. ಆದ್ದರಿಂದ ಯೋಜನೆಗಳನ್ನು ರೂಪಿಸುವಾಗ ಮಾನವ ಸಂಪನ್ಮೂಲಗಳನ್ನು ಮನದಲ್ಲಿರಿಸಿಕೊಂಡು ಸೂಕ್ತ ಅವಕಾಶಗಳನ್ನು ಕಲ್ಪಿಸುವುದೇ ಮುಖ್ಯ ಉದ್ದೇಶ, ಹೆಚ್ಚಿನ ಮಾನವ ಸಂಪನ್ಮೂಲ ಹೊಂದಿರುವ ನಮ್ಮ ದೇಶಕ್ಕೆ ಆಧುನಿಕ ಯಾಂತ್ರಿಕತೆ ಹಾಗೂ ಹೆಚ್ಚು ಬಂಡವಾಳ ಹೊಂದಿರುವಂತಹ ಕಸುಬುಗಳನ್ನು ಕೈಗೊಳ್ಳುವುದು ಸೂಕ್ತವಲ್ಲ.

ಈಗಾಗಲೆ ತಿಳಿಸಿರುವಂತೆ ಭಾರತವು ಶೇಕಡ 70 ರಷ್ಟು ಗ್ರಾಮೀಣ ಜನಸಂಖ್ಯೆಯನ್ನು ಹೊಂದಿದ್ದು ಜೀವನಾಧಾರಕ್ಕಾಗಿ ಕೃಷಿ ಆಧಾರಿತ ಕಸುಬುಗಳನ್ನು ಅನುಸರಿಸುತ್ತಿದ್ದು ರೇಷ್ಮೆ ಕೃಷಿಯನ್ನು ಬಹಳ ಪುರಾತನ ಕಾಲದಿಂದಲೂ ಉಪ ಕಸುಬಾಗಿ ಕ್ರಮೇಣ ಅಧಿಕ ಲಾಭ ಹಾಗೂ ಅಧಿಕ ಮಾನವ ಸಂಪನ್ಮೂಲಗಳನ್ನು ದೊರಕಿಸುವ ಈ ಉದ್ಯಮವನ್ನು ಮುಖ್ಯ ಕಸುಬಾಗಿ ಅನುಸರಿಸಲಾಗುತ್ತಿದೆ. ಅದರಲ್ಲೂ ಕರ್ನಾಟಕವು ಭಾರತದ ಅಪ್ರತಿಮ ರೇಷ್ಮೆ ಬೆಳೆಯುವ ರಾಜ್ಯವಾಗಿದೆ.

ಯಾವುದೇ ಕೃಷಿ ಕಸುಬನ್ನು ಆಯ್ದುಕೊಳ್ಳುವಾಗ ಸಾಮಾಜಿಕ, ಆರ್ಥಿಕ ಪರಿಸ್ಥಿತಿ, ಭೌಗೋಳಿಕ ಹಿನ್ನೆಲೆ ಹಾಗೂ ಕೃಷಿ ಆಧಾರಿತ ಗೃಹ ಕೈಗಾರಿಕೆಗಳಿಗೆ ಪ್ರಾದಾನ್ಯತೆ ನೀಡಬೇಕಾದ ಕಾರಣ ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸೂಕ್ತ.

1) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರಾರಂಭಿಕ ಹಂತದಲ್ಲಿ ಕಡಿಮೆ ಬಂಡವಾಳ ಹೂಡಿಕೆ.

2) ಹೂಡಿದ ಬಂಡವಾಳ ಹೆಚ್ಚು ದಿನ ಹಾಗೆಯೇ ಇರದೆ ಅಲ್ಪ ಸಮಯದಲ್ಲಿ ಸಾಕಷ್ಟು ಆದಾಯ ಬರುವಂತಿರಬೇಕು.

3) ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಮತ್ತು ಮಾರುಕಟ್ಟೆ ವ್ಯವಸ್ಥೆ ಇರಬೇಕು.

4) ತಾಂತ್ರಿಕ ಸಹಾಯ ಮತ್ತು ಹಣಕಾಸು ಸೌಲಭ್ಯ ದೊರೆಯುವಂತಿರಬೇಕು.

5) ಕುಟುಂಬದ ಹೆಚ್ಚು ಸದಸ್ಯರು ಪಾಲ್ಗೊಳ್ಳುವಿಕೆ ಹಾಗೂ ಉದ್ಯೋಗ ಆದಾಯ ಭದ್ರತೆ ಇರಬೇಕು.

6) ಸಮಾಜದ ವಿವಿಧ ವರ್ಗಗಳ ಎಲ್ಲಾ ಜನರು ಉದ್ಯಮವನ್ನು ಪಡೆಯುವಂತಿದ್ದು ಬಡತನವನ್ನು ನಿವಾರಿಸಲು ಸಹಕಾರಿಯಾಗಿರಬೇಕು.

7) ಉತ್ಪನ್ನಗಳಿಗೆ ಉತ್ತಮ ಮೌಲ್ಯ ಮತ್ತು ಉತ್ತಮ ಮಾರುಕಟ್ಟೆ ಸೌಲಭ್ಯ ಇರಬೇಕು.

ಮೇಲಿನ ಎಲ್ಲಾ ಅಂಶಗಳನ್ನು ಆಳವಾಗಿ ಪರಿಶೀಲಿಸಿದಾಗ 'ವಸ್ತ್ರಗಳ ರಾಣಿ', 'ಬಂಗಾರದ ಬೆಳೆ' 'ಎಲೆಯಿಂದ ಎಳೆ' ಎಂದೇ ಪ್ರಸಿದ್ಧಿಯಾಗಿರುವ "ರೇಷ್ಮೆಕೃಷಿ"

ಸೂಕ್ತವೆಂದು ಮನದಟ್ಟಾಗುತ್ತದೆ ಇದರ ಜೊತೆಗೆ ಕೃಷಿ ಆಧಾರಿತ ರೇಷ್ಮೆಕೃಷಿ ಗುಡಿ ಕೈಗಾರಿಕೆಯು ಈ ಕೆಳಕಂಡ ಪ್ರಯೋಜನಗಳನ್ನು ನೀಡುತ್ತದೆ.

1) ರೇಷ್ಮೆಕೃಷಿ ಗೃಹ ಕೈಗಾರಿಕೆಯಾಗಿದ್ದು ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳುವ ಅವಕಾಶವಿದ್ದು ಕೆಲಸದ ಸ್ಥಳ, ಸ್ವಭಾವ ಮತ್ತು ಸಮಯ ಅತಿ ಸೂಕ್ತವಾಗಿದೆ.

2) ಅತಿ ಸಣ್ಣ ಮತ್ತು ಜಮೀನಿಲ್ಲದ ರೈತರ ಆದಾಯ ಮಟ್ಟವನ್ನು ಉತ್ತಮ ಸ್ಥಿತಿಯಲ್ಲಿಡುತ್ತದೆ.

3) ರೇಷ್ಮೆಕೃಷಿ ಆಧಾರಿತ ವ್ಯವಸಾಯವು "ರೇಷ್ಮೆ ಮತ್ತು ಹಾಲು" ರೇಷ್ಮೆ ಮತ್ತು ಮೀನುಗಾರಿಕೆ" ಮುಂತಾದ ಸಮಗ್ರ ವ್ಯವಸಾಯ ವ್ಯವಸ್ಥೆಯನ್ನು ಉತ್ಪತ್ತಿ ಮಾಡುವ ವೈವಿಧ್ಯತೆಯನ್ನು ಹೊಂದಿದೆ.

4) ರೇಷ್ಮೆಕೃಷಿಯಿಂದ ಹೆಚ್ಚು ಉಪ-ಉತ್ಪನ್ನಗಳು ದೊರೆಯುತ್ತಿದ್ದು ಉತ್ತಮ ಬೆಲೆ ಹಾಗೂ ಉತ್ತಮ ಉತ್ಪಾದನಾ ಅವಕಾಶ ಇದೆ.

5) ರೇಷ್ಮೆ ಕೃಷಿಯಿಂದ ಯಾವುದೇ ವಿಷಪೂರಿತ ವಸ್ತುಗಳು ಬಿಡುಗಡೆಯಾಗದ ಕಾರಣ ಪರಿಸರಕ್ಕೆ ಯಾವ ರೀತಿಯ ಹಾನಿಯೂ ಇಲ್ಲ.

6) ಹೆಚ್ಚಿನ ವಿದೇಶಿ ವಿನಿಮಯ ಗಳಿಕೆ ಹೊಂದಿದೆ.

7) ರೇಷ್ಮೆಯು ಒಂದು ಆಡಂಬರದ ವಸ್ತು ವಾಗಿರುವುದರಿಂದ ಆದಾಯವು ಶ್ರೀಮಂತರಿಂದ ಬಡ ಕುಟುಂಬದವರಿಗೆ ವರ್ಗಾವಣೆಯಾಗುವುದು.

ಮೇಲೆ ತಿಳಿಸಿದ ಪ್ರಯೋಜನ ಅಂಶಗಳನ್ನು ಈ ಕೆಳಗೆ ವಿವರವಾಗಿ ವಿಶ್ಲೇಷಣೆ ಮಾಡಲಾಗಿದೆ.

ರೇಷ್ಮೆಕೃಷಿ ಒಂದು ಅನನ್ಯ ಕೈಗಾರಿಕೆ :

ರೇಷ್ಮೆಕೃಷಿಯು ಮೂರು ಮುಖ್ಯ ಕ್ಷೇತ್ರಗಳನ್ನು ಹೊಂದಿದ್ದು, ಅವುಗಳಲ್ಲಿ ಒಂದು ಮತ್ತೊಂದಕ್ಕೆ ಪೂರಕವಾಗಿದೆ. ಅವು ಯಾವುವೆಂದರೆ

1) ಹಿಪ್ಪುನೇರಳೆ ವ್ಯವಸಾಯ,

2) ರೇಷ್ಮೆಹುಳು ಸಾಕಾಣಿಕೆ

3) ನೂಲು ಬಿಚ್ಚಾಣಿಕೆ ಮತ್ತು ನೇಯುವಿಕೆ.

ಈ ಮೂರು ಮುಖ್ಯ ಕ್ಷೇತ್ರಗಳಲ್ಲಿ ಸಮಾಜದ ವಿವಿಧ ರೀತಿಯ ಜನರು ಒಳಪಡುತ್ತಾರೆ. ಆದ್ದರಿಂದ ರೇಷ್ಮೆಕಸುಬು ಸಮಾಜದ ಎಲ್ಲಾ ವರ್ಗದ ಜನರಿಗೆ ಉದ್ಯೋಗಾವಕಾಶ ಹಾಗೂ ಲಾಭ ದೊರಕಿಸುತ್ತದೆ. ಉದಾಹರಣೆಗೆ : ಹಿಪ್ಪುನೇರಳೆ ವ್ಯವಸಾಯ ಮತ್ತು

ರೇಷ್ಮೆಹುಳು ಸಾಕಾಣಿಕೆ ರೈತರ ಕಸುಬಾಗಿದ್ದು ಇದಕ್ಕೆ ಬೇಕಾಗುವ ಚಂದ್ರಿಕೆ, ತಟ್ಟೆಗಳನ್ನು ಕಮ್ಮಾರರು ಮಾಡುತ್ತಾರೆ. ಬಂದಂತ ಗೂಡುಗಳನ್ನು ಉಪಯೋಗಿಸಿಕೊಂಡು ರೇಷ್ಮೆ ನೂಲು ಬಿಚ್ಚಾಣಿಕೆಯ ಕೆಲಸವನ್ನು ಹೆಚ್ಚು ಮುಸ್ಲಿಂ ಬಾಂಧವರು ಮಾಡುತ್ತಾರೆ. ಇದರಿಂದ ಬಂದ ನೂಲನ್ನು ಮಾರವಾಡಿಗಳು ಕೊಂಡು, ನೇಯ್ಗೆಯವರಿಗೆ ಮಾರುತ್ತಾರೆ. ಈ ರೇಷ್ಮೆನೂಲು ನೇಯ್ಗೆಯನ್ನು ಸಮಾಜದ ನೇಯ್ಗೆಯವರು ನಡೆಸುತ್ತಿದ್ದಾರೆ. ಹೀಗೆ ರೇಷ್ಮೆಕೃಷಿಯು ಸಮಾಜದ ಎಲ್ಲಾ ವರ್ಗದವರನ್ನು ಒಂದುಗೂಡಿಸುವಲ್ಲಿ ಸಹಕಾರಿಯಾಗಿದೆ.

ರೇಷ್ಮೆಕೃಷಿ : ಒಂದು ಸರ್ವಕಾಲಿಕ ಗ್ರಾಮೀಣ ಕಸಬು

ನಮ್ಮ ದೇಶದ ವಾತಾವರಣ ಇಡೀ ವರ್ಷವು ರೇಷ್ಮೆಕೃಷಿಗೆ ಸೂಕ್ತವಾಗಿದ್ದು, ಹಿಪ್ಪನೇರಳೆ ಪ್ರತಿ ಎರಡು ತಿಂಗಳಿಗೊಮ್ಮೆ ಎಲೆಯನ್ನು ನೀಡುತ್ತದೆ. ಅಲ್ಲದೆ ರೇಷ್ಮೆಹುಳು ಕೇವಲ ಒಂದು ತಿಂಗಳಲ್ಲಿ ಗೂಡನ್ನು ಕಟ್ಟಿ ರೇಷ್ಮೆಯನ್ನು ದೊರಕಿಸಿಕೊಡುತ್ತದೆ. ಇದರಿಂದಾಗಿ ವರ್ಷಕ್ಕೆ ಸುಮಾರು 5 ರಿಂದ 6 ರೇಷ್ಮೆ ಬೆಳೆಗಳನ್ನು ಪಡೆಯಬಹುದು. ಇದು ಗ್ರಾಮೀಣ ಜನರಿಗೆ ವರ್ಷವಿಡೀ ಉದ್ಯೋಗವಕಾಶ ದೊರಕಿಸುವದಲ್ಲದೆ, ಕಡಿಮೆ ಅವಧಿಯಲ್ಲಿಯೇ ಅಧಿಕ ಲಾಭ ಒದಗಿಸುತ್ತದೆ.

ಹಿಪ್ಪನೇರಳೆ ಒಂದು "ಕಲ್ಪವೃಕ್ಷ"

ಹಿಪ್ಪನೇರಳೆ ರೇಷ್ಮೆಹುಳುವಿಗೆ ಪ್ರಮುಖ ಆಹಾರವಾಗಿರುವುದರ ಜೊತೆಗೆ ಅದು ಹಲವಾರು ವಿಶಿಷ್ಟ ಗುಣಗಳನ್ನು ಹೊಂದಿರುವುದರಿಂದ ಅದನ್ನು ವಿವಿಧ ಉದ್ದೇಶ

ಗಳಿಗೆ ಉಪಯೋಗಿಸಲಾಗುತ್ತದೆ. ಆದ್ದರಿಂದ ಇದನ್ನು "ಕಲ್ಪವೃಕ್ಷ" ವೆಂದು ಕರೆಯಬಹುದಾಗಿದೆ. ಹಿಪ್ಪನೇರಳೆಯ ಹಲವಾರು ಭಾಗಗಳು ಒಂದಲ್ಲ ಒಂದು ರೀತಿಯಲ್ಲಿ ಉಪಯೋಗಕ್ಕೆ ಬರುತ್ತವೆ. ಅವು ಯಾವುದೆಂದರೆ ಹಿಪ್ಪ ನೇರಳೆ ಹಣ್ಣು ತಿನ್ನಲು ಯೋಗ್ಯವಾಗಿದ್ದು ಹೆಚ್ಚು ಪ್ರೋಟಿನ್ ಮತ್ತು ಸಕ್ಕರೆ ಸಾರವನ್ನು ಹೊಂದಿದೆ. ಇದಲ್ಲದೆ ಈ ಹಣ್ಣುಗಳಿಂದ ತಂಪು ಪಾನಿಯಗಳು, ಹಣ್ಣು ಪಾಕ (ಜಾಮ್), ಜೆಲ್ಲಿ, ದ್ರಾಕ್ಷಾರಸ, ಇತ್ಯಾದಿಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಕೊಳೆತ ಎಲೆಗಳು ಮತ್ತು ಹಣ್ಣಾದ ಎಲೆಗಳು ಒಳ್ಳೆಯ ಗೊಬ್ಬರವಾಗಿ ಮಾರ್ಪಾಡು ಹೊಂದಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಹಿಪ್ಪನೇರಳೆ ಕಾಂಡವು ದೃಢವಾಗಿದ್ದು ಕ್ರಿಕೆಟ್, ಹಾಕಿ, ಟೆನ್ನಿಸ್ ಮುಂತಾದ ಆಟಗಳಿಗೆ ಬೇಕಾದ ಆಟದ ಸಾಮಾನುಗಳನ್ನು ಹಾಗೂ ಫ್ಯಾನ್ಸಿ ವಸ್ತುಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಹಿಪ್ಪ ನೇರಳೆ ಕಾಂಡವನ್ನು ಒಳ್ಳೆಯ ಉರುವಲಾಗಿ, ನಿರ್ಮಾಣ ವಸ್ತುವನ್ನಾಗಿ ಮತ್ತು ಹಿಪ್ಪನೇರಳೆ ವಂಶಾಭಿವೃದ್ಧಿಗಾಗಿ ಉಪಯೋಗಿಸುತ್ತಾರೆ. ಹಿಪ್ಪನೇರಳೆ ಬೇರುಗಳನ್ನು ಉರುವಲಿಗಾಗಿ ಉಪಯೋಗಿಸುವುದರಿಂದ ಅರಣ್ಯನಾಶ ವನ್ನು ತಡೆಗಟ್ಟಲು ಸಹಕಾರಿಯಾಗಿದೆ. ಹಿಪ್ಪನೇರಳೆ ಕಾಂಡದ ತೊಗಟೆಯನ್ನು ಕಾಗದ ತಯಾರಿಸಲು ಉಪಯೋಗಿಸುತ್ತಾರೆ. ಹಿಪ್ಪನೇರಳೆಯ ಎಲೆ, ಬೇರು ಮತ್ತು ಹಣ್ಣುಗಳನ್ನು ಉದರ ಬೇನೆ, ಗಂಟಲು ಬೇನೆ, ರಕ್ತದ ಒತ್ತಡ ನಿವಾರಿಸಲು ಔಷಧಿಯನ್ನಾಗಿ ಉಪಯೋಗಿ ಸುತ್ತಾರೆ. ಇತ್ತೀಚಿನ ಸಂಶೋಧನೆಯ ಪ್ರಕಾರ ಹಿಪ್ಪ ನೇರಳೆ ಬೇರಿನ ತೊಗಟೆಯು ಏಡ್ಸ್ ರೋಗವನ್ನು

ತಡೆಯುತ್ತದೆಯೆಂದು ತಿಳಿಸಲಾಗಿದೆ. ಇದಲ್ಲದೆ ಹಿಪ್ಪ ನೇರಳೆಯು ಪರಿಸರ ಹಚ್ಚ ಹಸಿರಾಗಿಸಲು, ಮಣ್ಣು ಸವೆತ ವನ್ನು ತಡೆಯಲು ಮತ್ತು ಮಣ್ಣನ್ನು ರಕ್ಷಿಸುವಲ್ಲಿ ಸಹಕಾರಿಯಾಗಿದೆ.

ರೇಷ್ಮೆಕೃಷಿ ಹಾಗೂ ಬೆಟ್ಟ ಪ್ರದೇಶ

ಕಾಫಿ ಹಾಗೂ ಟೀ ಬೆಳೆಗಳನ್ನು ಬೆಟ್ಟ ಪ್ರದೇಶ ಗಳಲ್ಲಿ ಹೇರಳವಾಗಿ ಬೆಳೆಯುತ್ತಾರೆ. ಈ ಬೆಟ್ಟ ಪ್ರದೇಶ ಗಳಲ್ಲಿ ಹೆಚ್ಚಾಗಿ ಉಪಯೋಗಿಸದ ಭೂಮಿ ಇದ್ದು ಇದರಲ್ಲಿ ಹಿಪ್ಪನೇರಳೆಯನ್ನು ಬೆಳೆದು ಹುಳು ಸಾಕಾಣಿಕೆ ಮಾಡುವುದರಿಂದ ಹೆಚ್ಚು ಲಾಭದಾಯಕವಾಗುತ್ತದೆ. ಇದಲ್ಲದೆ ಇಲ್ಲಿ ಹಿಪ್ಪನೇರಳೆಯನ್ನು ಮಧ್ಯಂತರ ಮತ್ತು ಪೊದರುಗಳ ರೂಪದಲ್ಲಿ ಬೆಳೆಯುತ್ತಾರೆ. ಇದರಿಂದ ಮರಮುಟ್ಟು ದೊರೆಯುತ್ತಿದ್ದು ಉರುವಲಾಗಿ ಉಪ ಯೋಗಿಸುತ್ತಾರೆ. ಹೀಗೆ ಬೆಟ್ಟ ಪ್ರದೇಶದ ಕುಟುಂಬ ಮಂದಿ ತಮ್ಮ ಕಾಲಾವಕಾಶವನ್ನು ಪರಿಣಾಮಕಾರಿಯಾಗಿ ಹಾಗೂ ಹೆಚ್ಚು ಲಾಭದಾಯಕವಾಗಿ ಬಳಸಿಕೊಳ್ಳ ಬಹುದು.

ಹುಳು ಸಾಕಾಣಿಕೆ ಒಂದು ಸರ್ವಕಾಲಿಕ ಅಲ್ಪಾವಧಿ ಕಸುಬು

ಹಿಪ್ಪನೇರಳೆ ಕಡ್ಡಿ ನಾಟಿ ಮಾಡಿದ 7 ರಿಂದ 8 ತಿಂಗಳ ನಂತರ ಹಿಪ್ಪನೇರಳೆ ಸೊಪ್ಪು ಸದಾ ಪ್ರತಿ ಎರಡು ತಿಂಗಳಿಗೊಮ್ಮೆ ದೊರೆಯುತ್ತದೆ. ಹಾಗೆಯೇ ರೇಷ್ಮೆ ಹುಳು ಸಹ ಕೇವಲ 24 ರಿಂದ 28 ದಿವಸಗಳಲ್ಲಿ

ಮೊಟ್ಟೆಯಿಂದ ಮರಿಯಾಗಿ ಬೆಳೆದು ಗೂಡು ಕಟ್ಟುತ್ತದೆ. ಇದರಿಂದ ಪ್ರತಿ ವರ್ಷ 5 ರಿಂದ 6 ಬೆಳೆಗಳನ್ನು ಪಡೆಯಲು ಸಾಧ್ಯ. ಈ ನಿಟ್ಟಿನಲ್ಲಿ ರೇಷ್ಮೆಕೃಷಿಯು ಬೇರಾವುದೇ ಬೆಳೆಗಳಿಗೆ ಹೋಲುವುದಿಲ್ಲ. ಈ ಅಲ್ಪಾವಧಿ ಯಿಂದ ಅಲ್ಪ ಕಾಲದಲ್ಲಿ ಹೆಚ್ಚು ಹಣ ದೊರೆ ಯುತ್ತದೆ.

ಹಿಪ್ಪನೇರಳೆ ಹಾಗೂ ಅನಾವೃಷ್ಟಿ

ಹಿಪ್ಪನೇರಳೆಯು ಒಂದು ದೃಢವಾದ, ಹೆಚ್ಚು ಜೀವರಾಶಿಯನ್ನು ಉತ್ಪತ್ತಿಮಾಡುವ ಸಸ್ಯವಾಗಿದ್ದು ಎಲ್ಲಾ ಭೂಮಿ ಹಾಗೂ ವಾತಾವರಣದಲ್ಲಿ ಬೆಳೆಯುತ್ತದೆ. ಈ ಸಸಿಯು ತೇವಾಂಶ ಹಾಗೂ ಶೈತ್ಯಾಂಶ ಕೊರತೆಯನ್ನು ಸಹಿಸಿಕೊಳ್ಳುತ್ತದೆ. ಇದಲ್ಲದೆ ಹಿಪ್ಪನೇರಳೆ ನೀರಾವರಿ ಹಾಗೂ ಆಧುನಿಕ ಸುಧಾರಿತ ತಾಂತ್ರಿಕ ಕ್ರಮಗಳಿಗೆ ಚೆನ್ನಾಗಿ ಪ್ರತಿಕ್ರಿಯೆ ತೋರುತ್ತದೆ.

ರೇಷ್ಮೆಕೃಷಿ ಒಂದು ಸಮಗ್ರ ದುಡಿಮೆ ಕೈಗಾರಿಕೆ

ರೇಷ್ಮೆಕೃಷಿಯನ್ನು ಭಾರತದಲ್ಲಿನ ಸುಮಾರು 6.29 ಲಕ್ಷ ಹಳ್ಳಿಗಳ ಪೈಕಿ 59,528 ಹಳ್ಳಿಗಳಲ್ಲಿ ನಡೆಯುತ್ತಿದ್ದು, ಸುಮಾರು 60 ಲಕ್ಷಕ್ಕೂ ಹೆಚ್ಚು ಗ್ರಾಮೀಣ ಹಾಗೂ ಅರೆ ನಗರವಾಸಿಗಳಿಗೆ ಕೆಲಸದೊರಕಿದೆ. ನಮ್ಮ ದೇಶದಲ್ಲಿ ಸುಮಾರು 306 ಮಿಲಿಯನ್ ಜನ ಸಂಖ್ಯೆಯು ಬಡತನ ರೇಖೆಗಿಂತ ಕೆಳಗಿದ್ದು, ಇದರಲ್ಲಿ 249 ಮಿಲಿಯನ್ ಜನ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ 57 ಮಿಲಿಯನ್ ಜನರು ಪಟ್ಟಣ ನಗರಗಳಲ್ಲಿ

ವಾಸಿಸುತ್ತಿದ್ದಾರೆ. ಆದ್ದರಿಂದ ಯಾವುದೇ ಯೋಜನೆ ಹಮ್ಮಿಕೊಳ್ಳಬೇಕಾದಾಗ ಹೆಚ್ಚಿನ ಉದ್ಯೋಗಾವಕಾಶ ವನ್ನು ಒದಗಿಸುವುದು ಮುಖ್ಯ ಉದ್ದೇಶವಾಗಿದ್ದು, ರೇಷ್ಮೆಕೃಷಿ ಗುಡಿ ಕೈಗಾರಿಕೆ ಇದಕ್ಕೆ ಪೂರಕವಾಗಿದೆ.

ಒಂದು ಅಂದಾಜಿನ ಪ್ರಕಾರ ಒಂದು ಎಕರೆ ಹಿಪ್ಪ ನೇರಳೆಯು ಸುಮಾರು 5 ಜನರಿಗೆ ವರ್ಷವಿಡೀ ಉದ್ಯೋಗ ದೊರಕಿಸುತ್ತದೆ. ರೇಷ್ಮೆಕೃಷಿಯ ವಿವಿಧ ಮಜಲುಗಳಲ್ಲಿ ದೊರೆಯುವ ಉದ್ಯೋಗಾವಕಾಶ ಈ ಕೆಳಗಿನಂತಿದೆ.

1) ಹಿಪ್ಪುನೇರಳೆ ಬೇಸಾಯ : ಹಿಪ್ಪನೇರಳೆ ಬೇಸಾಯವು ಸ್ಥಾಪನೆ ಹಾಗೂ ನಿರ್ವಹಣೆ ಎಂಬ ಎರಡು ಘಟ್ಟಗಳನ್ನು ಹೊಂದಿದೆ. ಹಿಪ್ಪನೇರಳೆ ಸ್ಥಾಪನೆಯಲ್ಲಿ ನಾಟಿ ಮಾಡಲು ಹಾಗೂ ಒಂದು ವರ್ಷದವರೆಗೂ ನಿರ್ವಹಣೆ ಮಾಡಲು ಒಂದು ಎಕರೆಗೆ 251 ಮಾನವ ದಿನಗಳು ಖುಷ್ಕಿ ಭೂಮಿಗೆ ಹಾಗೂ ನೀರಾವರಿ ಪ್ರದೇಶಕ್ಕೆ 197 ಮಾನವ ದಿನಗಳು ಬೇಕಾಗುತ್ತದೆ. ಖುಷ್ಕಿ ಪ್ರದೇಶಗಳಲ್ಲಿ ಹೆಚ್ಚಿನ ಉದ್ಯೋಗ ದೊರೆಯುವುದಕ್ಕೆ ಕಾರಣವೇನೆಂದರೆ ಗುಂಡಿಗಳನ್ನು ತಯಾರು ಮಾಡಲು ಬೇಕಾಗುತ್ತದೆ.

ಹಿಪ್ಪನೇರಳೆ ನಿರ್ವಹಣೆ ಕಳೆ, ನಿರ್ಮೂಲನೆ ಅಂತರಬೇಸಾಯ, ಗೊಬ್ಬರ ನಿರ್ವಹಣೆ, ಸವರುವಿಕೆ, ಎಲೆ ಕೊಯ್ಲು ಮುಂತಾದ ಕಾರ್ಯಗಳಿದ್ದು ಒಂದು ಎಕರೆಗೆ ಮಳೆ ಆಧಾರಿತ ಪ್ರದೇಶದಲ್ಲಿ 26 ಮಾನವದಿನ ಗಳು ಮತ್ತು 300 ಮಾನವದಿನಗಳು ನೀರಾವರಿ

ಪ್ರದೇಶಗಳಿಗೆ ಬೇಕಾಗುವುದು. ಈ ವ್ಯತ್ಯಾಸ ಮುಖ್ಯವಾಗಿ ನೀರಾವರಿ ಪ್ರದೇಶದಲ್ಲಿ ಸಮಗ್ರ ಬೇಸಾಯ ಕ್ರಮಗಳನ್ನು ಅನುಸರಿಸುವುದರಿಂದ ಹೆಚ್ಚಿನ ಉದ್ಯೋಗ ದೊರೆಯುತ್ತದೆ.

2) ರೇಷ್ಮೆಹುಳು ಸಾಕಾಣಿಕೆ

ಹುಳು ಸಾಕಾಣಿಕೆಯು ಹೆಚ್ಚು ಕೆಲಸ ಹೊಂದಿರುವ ಕಸುಬು. ಹುಳು ಸಾಕಣೆಯಲ್ಲಿನ ಕಾರ್ಯಗಳಾವುದೆಂದರೆ ಮೊಟ್ಟೆ ಪರಿಪಾಕಿಸುವಿಕೆ, ಸ್ವಚ್ಛತೆ, ಸೋಂಕು ನಿವಾರಣೆ, ಚಾಕಿ ಕಟ್ಟುವಿಕೆ, ಆಹಾರ ನೀಡುವಿಕೆ, ಕಸ ತೆಗೆಯುವಿಕೆ, ಸೊಪ್ಪು ಕತ್ತರಿಸುವಿಕೆ, ಸ್ಥಳಾವಕಾಶ ಒದಗಿಸುವಿಕೆ, ಸೋಂಕು ನಿವಾರಣಾ ಔಷಧಿಗಳ ಸಿಂಪರಣೆ, ಹಣ್ಣಾದ ಹುಳುಗಳನ್ನು ಚಂದ್ರಿಕೆಯಲ್ಲಿ ಗೂಡು ಕಟ್ಟಲು ಬಿಡುವಿಕೆ, ಗೂಡು ಬಿಡಿಸುವಿಕೆ, ಗೂಡುಗಳ ವಿಂಗಡನೆ ಮತ್ತು ಮಾರಾಟ ಮುಂತಾದವು. ಈ ಎಲ್ಲಾ ಕಾರ್ಯಗಳಿಗೆ ವರ್ಷವಿಡೀ ಒಂದು ಎಕರೆಗೆ ಸುಮಾರು 116 ಮಾನವ-ದಿನಗಳು ಮಳೆ ಆಧಾರಿತ ಹಾಗೂ 290 ಮಾನವ-ದಿನಗಳು ನೀರಾವರಿ ಭೂಮಿಗೂ ಬೇಕಾಗುತ್ತದೆ.

3) ನೂಲು ಬಿಚ್ಚಾಣಿಕೆ ಮತ್ತು ನೇಯ್ಗೆ

ನೂಲು ಬಿಚ್ಚಾಣಿಕೆಯಲ್ಲಿ ಗೂಡುಗಳನ್ನು ಕೊಂಡೊಯ್ಯಲು, ನಂದಿಸಲು, ಕುದಿಸಲು, ನೂಲು ಬಿಚ್ಚಾಣಿಕೆ, ಹುರಿಮಾಡಲು ಹಾಗೂ ಅಂಟು ತೆಗೆಯುವಿಕೆ, ಬಿಳುಚುವಿಕೆ, ಬಣ್ಣಕಟ್ಟುವಿಕೆ ಮತ್ತು

ಬಟ್ಟೆ ನೇಯ್ಗೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರ ಅವಶ್ಯಕತೆ ಇದೆ ನೂಲು ಬಿಚ್ಚಲು ಒಂದು ಎಕರೆಗೆ ವರ್ಷವಿಡೀ 14 ಮಾನವದಿನಗಳು ಮಳೆ ಆಶ್ರಿತ ಹಾಗೂ 42 ಮಾನವ-ದಿನಗಳು ನೀರಾವರಿ ಜಮೀನಿಗೆ ಬೇಕಾಗಿರುತ್ತದೆ. ರೇಷ್ಮೆ ಹುರಿ ಮಾಡು ವಿಕೆಗೆ ಒಂದು ಎಕರೆಗೆ ಒಂದು ಮಾನವದಿನ ಮಳೆ ಯಾಶ್ರಿತ ಹಾಗೂ ನೀರಾವರಿಗೆ 3 ಮಾನವ ದಿನಗಳು ಬೇಕಾಗಿರುತ್ತದೆ.

ಬಟ್ಟೆ ನೇಯುವಿಕೆಗೆ ಸಂಬಂಧಿಸಿದಂತೆ ಸುಮಾರು 1.74 ಮಾನವದಿನಗಳು ಮಳೆಯಾಶ್ರಿತ ಹಾಗೂ 4.35 ಮಾನವದಿನಗಳು ನೀರಾವರಿಗೆ ಅವಶ್ಯವಿರುತ್ತದೆ. ಇದರ ಜೊತೆಗೆ ಸ್ಪನ್ ರೇಷ್ಮೆ ಬಟ್ಟೆಯನ್ನು ತಯಾರು ಮಾಡಲು ಕಾರ್ಮಿಕರು ಬೇಕಾಗಿರುತ್ತಾರೆ.

4) ರೇಷ್ಮೆ ಮೊಟ್ಟೆ ಉತ್ಪಾದನೆ

ರೇಷ್ಮೆ ಬಿತ್ತನೆ ಕೋಠಿಗಳಲ್ಲಿ ಹೆಚ್ಚು ಕಾರ್ಮಿಕರ ಅವಶ್ಯಕತೆಯಿದ್ದು ಗೂಡುಗಳ ಸಂರಕ್ಷಣೆ, ಚಿಟ್ಟೆ ಬೇರ್ಪಡಿಸುವಿಕೆ, ಆಮ್ಲ ಉಪಚಾರ, ತಾಯಿ ಚಿಟ್ಟೆ ಪರೀಕ್ಷೆ, ಲಿಂಗ ಬೇರ್ಪಡಿಸುವಿಕೆ ಮುಂತಾದ ಕಾರ್ಯ ಗಳಲ್ಲಿ ಕಾರ್ಮಿಕರ ಸಕಾಲಿಕ ಅವಶ್ಯಕತೆಯಿದೆ. ಈ ಕಾರ್ಯಗಳಿಗೆಒಂದು ಎಕರೆಗೆ ಸುಮಾರು 1.25 ಮಳೆ ಆಧಾರಿತ ಹಾಗೂ 2,875 ಮಾನವದಿನಗಳು ನೀರಾವರಿಗೆ ಬೇಕಾಗುತ್ತದೆ.

5) ರೇಷ್ಮೆಹುಳು ಸಾಕಾಣಿಕಾ ಉಪಕರಣಗಳ ತಯಾರಿಕೆ:

ರೇಷ್ಮೆ ಕೃಷಿಯು ಪರೋಕ್ಷವಾಗಿ ಹುಳು ಸಾಕಾಣಿ ಉಪಕರಣಗಳನ್ನು ತಯಾರು ಮಾಡಲು ತುಂಬಾ ಅನುಕೂಲವಾಗಿದೆ. ತಟ್ಟೆ, ಚಂದ್ರಿಕೆ, ದಡೇವು, ಬುಟ್ಟಿ, ಸೊಪ್ಪು ಕತ್ತರಿಸುವ ಹಲಗೆ ಮುಂತಾದ ಉಪಕರಣಗಳನ್ನು ತಯಾರಿಸಲು ಅಧಿಕ ಉದ್ಯೋಗಾವ ಕಾಶವನ್ನು ಕಲ್ಪಿಸಿದೆ.

ರೇಷ್ಮೆಕೃಷಿ ಹಾಗೂ ಇತರೆ ಕೃಷಿ ಬೆಳೆಗಳ ಉದ್ಯೋಗ ತುಲನೆ

ರೇಷ್ಮೆಕೃಷಿಯ ಉದ್ಯೋಗವನ್ನು ಕೆಲವು ಮುಖ್ಯ ಬೆಳೆಗಳಿಗೆ ಹೋಲಿಸಿದಾಗ ಹಿಪ್ಪನೇರಳೆ ಬೇಸಾಯವು ಅಧಿಕ ಉದ್ಯೋಗ ಕಲ್ಪಿಸುತ್ತದೆ. ಆದ್ದರಿಂದ ರೇಷ್ಮೆ ಕೃಷಿಯನ್ನು "ಪರಿಶ್ರಮ ಪೂರ್ಣ-ಗುಡಿ ಕೈಗಾರಿಕೆ" ಎಂದು ಕರೆಯುತ್ತಾರೆ. ಕೆಲವು ಮುಖ್ಯ ಬೆಳೆಗಳಿಗೆ ಬೇಕಾಗುವ ಉದ್ಯೋಗವನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕ್ರಮ. ಸಂಖ್ಯೆ	ಬೆಳೆ ಹೆಸರು	ಖುಷ್ಕಿ	ನೀರಾವರಿ
01.	ಹಿಪ್ಪನೇರಳೆ ಬೇಸಾಯ	123	393
02.	ರಾಗಿ	50	85
03.	ಜೋವಾರು	40	—
04.	ಬತ್ತ	—	80
05.	ಕಡಲೆಕಾಯಿ	72	93
06.	ಆಲೂಗಡ್ಡೆ	52	150

ಮೂಲ : ಇಂಡಿಯನ್ ಸಿಲ್ಕ್ : ಜೂನ್ 1987

ರೇಷ್ಮೆಕೃಷಿ ಹಾಗೂ ಕುಟುಂಬ ಕಾರ್ಮಿಕರು

ರೇಷ್ಮೆಕೃಷಿಯನ್ನು ಸ್ವಂತ ಮನೆಗಳಲ್ಲಿಯೇ ಹುಳು ಸಾಕಾಣಿಕೆ ಮಾಡಲು ತುಂಬಾ ಸೂಕ್ತವಾಗಿದ್ದು, ಕುಟುಂಬದ ಜನರನ್ನು ಹೆಚ್ಚು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಅನುಕೂಲವಾಗಿದೆ. ಕುಟುಂಬದ ಗಂಡಸರು, ಹೆಂಗಸರು ಮತ್ತು ಮಕ್ಕಳೆಲ್ಲರೂ ಈ ಕೃಷಿ ಯಲ್ಲಿ ತೊಡಗಲು ಸಹಾಯಕವಾಗಿದೆ. ಬೆಂಗಳೂರಿ ನಲ್ಲಿರುವ ಸಾಮಾಜಿಕ ಆರ್ಥಿಕ ಬದಲಾವಣೆ ಸಂಸ್ಥೆಯ ವರದಿಯೊಂದರ ಪ್ರಕಾರ ಸುಮಾರು ಶೇಕಡ 46 ರಷ್ಟು ಉದ್ಯೋಗವನ್ನು ಕುಟುಂಬದ ಜನರೇ ಕೈಗೊಂಡಿರು ತ್ತಾರೆ. ಉಳಿದ ಶೇ. 54 ರಷ್ಟು ಉದ್ಯೋಗವನ್ನು ಮಾತ್ರ ಕೂಲಿಗಾರರು ಕೈಗೊಂಡಿರುತ್ತಾರೆ. ರೇಷ್ಮೆ ಹುಳು ಸಾಕಾಣಿಕೆಗೆ ಅಧಿಕ ಕುಟುಂಬ ಮಂದಿ ಅಂದರೆ ಶೇ. 59 ರಷ್ಟು ತೊಡಗಿರುತ್ತಾರೆ. ಇದಲ್ಲದೆ ಕುಟುಂಬದ ಮುದುಕರು ಮತ್ತು ಮಕ್ಕಳು ಯಶಸ್ವಿ ಯಾಗಿ ತೊಡಗಿರುವುದು ಒಂದು ವೈಶಿಷ್ಟವಾಗಿದೆ.

ರೇಷ್ಮೆ ಕೃಷಿ ಹಾಗೂ ಮಹಿಳೆ

ರೇಷ್ಮೆಕೃಷಿಯಲ್ಲಿನ ವಿವಿಧ ಕಾರ್ಯಗಳ ಸ್ವಭಾ ವವು ಮಹಿಳೆಯರಿಗೆ ತುಂಬಾ ಸೂಕ್ತವಾಗಿದ್ದು ಹೆಚ್ಚು ಮಹಿಳೆಯರು ರೇಷ್ಮೆಕೃಷಿಯನ್ನು ಕೈಗೊಂಡಿದ್ದಾರೆ. ಭಾರತದಲ್ಲಿ ಮಹಿಳೆಯರನ್ನು "ಮನೆದೇವರು" ಎಂದು ಪರಿಗಣಿಸಲು ಕಾರಣವೇನೆಂದರೆ ಅವರು ತಮ್ಮ ಹಾಗೂ ಕುಟುಂಬದ ಜೀವನಾಧಾರಕ್ಕಾಗಿ ತಮ್ಮನ್ನು ತಾವೇ ತೊಡಗಿಸಿಕೊಳ್ಳುತ್ತಾರೆ.

ರೇಷ್ಮೆಕೃಷಿಯು ಒಂದು ಮನೆ ಕೆಲಸವಾಗಿದ್ದು ರೇಷ್ಮೆ ಹುಳು ಸಾಕಾಣಿಕೆ ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆಯನ್ನು ತಮ್ಮ ತಮ್ಮ ಮನೆಗಳಲ್ಲಿಯೇ ಕೈಗೊಳ್ಳಲು ತುಂಬಾ ಸೂಕ್ತವಾಗಿದ್ದು ಮಹಿಳೆಯರಿಗೆ ಉತ್ತೇಜನಕಾರಿಯಹಾಗಿದೆ. ಮಹಿಳೆಯರು ತಮ್ಮ ಮನೆಯಲ್ಲಿ ಅಡಿಗೆ ಮಾಡುವುದು. ಆಕಳು ಸಾಕಾಣಿಕೆ ಮುಂತಾದ ತನ್ನ ಸಂಸಾರದ ಕಾರ್ಯಗಳ ಜೊತೆಯಲ್ಲಿಯೇ ರೇಷ್ಮೆ ಹುಳು ಸಾಕಾಣಿಕೆ ಮತ್ತು ನೂಲು ಬಿಚ್ಚಾಣಿಕೆಯನ್ನು ಯಶಸ್ವಿಯಾಗಿ ಕೈಗೊಳ್ಳಲು ಅನುಕೂಲಕರವಾಗಿದೆ.

ಮಹಿಳೆಯರು ಮುಖ್ಯವಾಗಿ ರೇಷ್ಮೆಹುಳು ಸಾಕಾಣಿಕೆ ಮತ್ತು ನೂಲು ಬಿಚ್ಚಾಣಿಕೆಯಲ್ಲಿ ಹೆಚ್ಚಾಗಿ ತೊಡಗಿದ್ದಾರೆ. ರೇಷ್ಮೆಹುಳು ಸಾಕಾಣಿಕೆಗೆ ಶೇ. 61.3 ಮತ್ತು ನೂಲು ಬಿಚ್ಚಾಣಿಕೆಗೆ ಶೇ. 41.3ರಷ್ಟು ಮಂದಿ ತೊಡಗಿರುತ್ತಾರೆ. ಇತ್ತೀಚಿನ ಅಂದಾಜಿನ ಪ್ರಕಾರ ಶೇ. 52.8 ರಷ್ಟು ಮಂದಿ ಮಹಿಳೆಯರು ರೇಷ್ಮೆಕೃಷಿಯಲ್ಲಿ ತೊಡಗಿರುತ್ತಾರೆ ಆದ್ದರಿಂದ ಮಹಿಳೆಯರಿಗೆ ಇನ್ನೂ ಹೆಚ್ಚಿಗೆ ಉತ್ತೇಜನ ನೀಡಲು 1994ನೇ ಸಾಲನ್ನು "ರೇಷ್ಮೆಕೃಷಿಯಲ್ಲಿ ಮಹಿಳಾವರ್ಷ"ವನ್ನಾಗಿ ಆಚರಿಸಲಾಯಿತು.

ಶ್ರೀಮಂತರಿಂದ ಬಡವರಿಗೆ ಹಣ ವರ್ಗವಣೆ

ಸಮಾಜದಲ್ಲಿ ರೇಷ್ಮೆಕೃಷಿಯು ಶ್ರೀಮಂತರಿಂದ ಬಡವರಿಗೆ ಹಣ ವರ್ಗಾವಣೆಯಹಾಗುವಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ. ಅಂತ್ಯವಸ್ತುವಾದ ರೇಷ್ಮೆ ವಸ್ತ್ರವನ್ನು

ಹಾಗೂ ರೇಷ್ಮೆ ಉತ್ಪನ್ನಗಳನ್ನು ಸಾಮಾನ್ಯವಾಗಿ ಎಲ್ಲಾ ಶ್ರೀಮಂತರು ಉಪಯೋಗಿಸುತ್ತಾರೆ. ಮತ್ತು ಇದರ ಮಾರಾಟದಿಂದಬಂದ ಹಣವು ರೇಷ್ಮೆ ಬೆಳೆಗಾರರು, ನೂಲು ಬಿಚ್ಚಾಣಿಕೆದಾರರು, ಹುರಿ ಮಾಡುವವರು, ನೇಕಾರ ಮತ್ತು ವ್ಯಾಪಾರಿಗಳಿಗೆ ಹಂಚಿಕೊಳ್ಳುತ್ತದೆ. ಇದರಲ್ಲಿ ರೇಷ್ಮೆ ಬೆಳೆಗಾರರದೇ ಸಿಂಹಪಾಲು. ಈ ರೇಷ್ಮೆ ವಸ್ತ್ರದ ಬೆಲೆ ಹಂಚಿಕೆಯು ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ವಲಯ	ಶೇಖಡಾವಾರು ಹಂಟಿಕೆ	ಪ್ರತಿಫಲ : ಎಕರೆಗೆ ರೂ.ಗಳಲ್ಲಿ
1	ರೇಷ್ಮೆ ಬೆಳೆಗಾರರು	54.6	8,387
2	ನೂಲು ಬಿಚ್ಚಾಣಿಕೆ ದಾರರು	6.6	11,014
3	ಹುರಿ ಮಾಡುವವರು	8.7	1,338
4	ನೇಕಾರರು	12.3	1,869
5	ವ್ಯಾಪಾರಿದಾರರು	7.8	2,734
		100	15,360

ಮೂಲ ; ಇಂಡಿಯನ್ ಸಿಲ್ಕ್ : ಜೂನ್1987

ರೇಷ್ಮೆಕೃಷಿ ಕಡಿಮೆ ಬಂಡವಾಳ ಹಾಗೂ ಅಧಿಕ ಲಾಭದ ಕೈಗಾರಿಕೆ :

ರೇಷ್ಮೆ ಕೈಗಾರಿಕೆಯ ವೈಶಿಷ್ಟ್ಯವೇನೆಂದರೆ ಕಡಿಮೆ ಬಂಡವಾಳದ ಅವಶ್ಯಕತೆಯಿದ್ದು ಅಧಿಕ ಲಾಭ ನೀಡುವ ಉದ್ಯಮವಾಗಿದೆ. ಆದರೆ ಬೇರೆ ಕೃಷಿ ಬೆಳೆಗಳಾದ ಆಲೂ ಗಡ್ಡೆ, ದ್ರಾಕ್ಷಿ ಮುಂತಾದ ಬೆಳೆಗಳಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆ ಇದ್ದು, ಮಾಮೂಲಿ ಲಾಭ ಗಳಿಸಿಕೊಡುವು

ದಲ್ಲದೆ, ಹೆಚ್ಚು ಸಮಯಾವಕಾಶವನ್ನು ತೆಗೆದುಕೊಳ್ಳುತ್ತದೆ. ದ್ರಾಕ್ಷಿ ಬೆಳೆಯು ಲಾಭದಾಯಕವಾಗಿದ್ದರೂ ಸಹ ಹೆಚ್ಚು ಬಂಡವಾಳ, ಉತ್ತಮ ತಂತ್ರಜ್ಞಾನ, ತಿಳುವಳಿಕೆ ಹಾಗೂ ಹೆಚ್ಚು ಕಾಲ ತೆಗೆದುಕೊಳ್ಳುವುದರಿಂದ ಭಾರತದ ಎಲ್ಲಾ ಗ್ರಾಮೀಣ ಜನರಿಗೆ ಅದು ಸಾಧ್ಯವಿಲ್ಲ.

ಕರ್ನಾಟಕದಲ್ಲಿ ಆಹಾರ ಬೆಳೆಗಳು ಶೇಕಡ 36ರಷ್ಟು ಪ್ರದೇಶವನ್ನು ಹೊಂದಿದ್ದರೂ ವಾಣಿಜ್ಯ ಬೆಳೆಗಳಲ್ಲಿ ಹಿಪ್ಪ ನೇರಳೆ ಪ್ರದೇಶವೇ ಮೇಲುಗೈ ಸಾಧಿಸಿದೆ. ಹಿಪ್ಪನೇರಳೆ ಶೇ. 21.3, ತೆಂಗು ಶೇ. 16, ಸೂರ್ಯಕಾಂತಿ ಶೇ. 11.7, ತರಕಾರಿ ಬೆಳೆಗಳು ಶೇ. 5.6, ಹತ್ತಿ ಶೇ. 4 ಹಾಗೂ ಕಡಲೇಕಾಯಿ ಶೇ. 2.7ರಷ್ಟು ಪ್ರದೇಶವನ್ನು ಹೊಂದಿದೆ.

ವಿವಿಧ ವಾಣಿಜ್ಯ ಬೆಳೆಗಳ ಲಾಭ ಹೋಲಿಕೆಯನ್ನು ಈ ಕೆಳಗೆ ನೀಡಲಾಗಿದೆ.

(ಆದಾಯ : ರೂ.ಗಳಲ್ಲಿ/ಎಕರೆ/ಬೆಳೆ)

ಕ್ರಮ ಸಂಖ್ಯೆ	ಬೆಳೆ	ಒಟ್ಟು ಲಾಭ	ನಿವ್ವಳ ಲಾಭ
1	ಕಡಲೆಕಾಯಿ	2,500	1,500
2	ಜೋಳ	2,000	1,000
3	ಕಬ್ಬು	11,250	3,000
4	ಆಲೂಗಡ್ಡೆ	7,500	3,000
5	ಹಿಪ್ಪನೇರಳೆ		
	(ಅ) ಮಿಶ್ರತಳಿ	10,800	6,300
	(ಅ) ದ್ವಿತಳಿ	14,000	8,400

ಮೂಲ ಇಂಡಿಯನ್ ಸಿಲ್ಕ್ : ಜುಲೈ 1985

ರೇಷ್ಮೆಕೃಷಿ ಹಾಗೂ ವಿದೇಶಿ ವಿನಿಮಯ ಗಳಿಕೆ

ನಮ್ಮ ದೇಶದ ರೇಷ್ಮೆ ವಸ್ತ್ರಗಳಿಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆ ಇದ್ದು ಹೆಚ್ಚು ಹೆಚ್ಚು ವಿದೇಶಿ ವಿನಿಮಯ ಗಳಿಸಿ ಕೊಟ್ಟಿದೆ. ಇದಲ್ಲದೆ ರೇಷ್ಮೆ ಉಪ-ಉತ್ಪನ್ನಗಳಿಗೆ ವಿದೇಶಿ ಬೇಡಿಕೆ ಯಿದ್ದು ರೇಷ್ಮೆಕೃಷಿ ಜನಪ್ರಿಯವಾಗಲು ಉತ್ತೇಜನ ಕಾರಿಯಾಗಿದೆ. ಪ್ರತಿ ವರ್ಷ ಭಾರತದ ರೇಷ್ಮೆ ಕೈಗಾ ರಿಕೆಯ ರಫ್ತು ಸುಮಾರು 440 ಕೋಟಿ ರೂ. ಗಳೆಂದು ಅಂದಾಜು ಮಾಡಲಾಗಿದೆ.

ರೇಷ್ಮೆಕೃಷಿ ಉಪಉತ್ಪನ್ನಗಳು

ರೇಷ್ಮೆಕೃಷಿಯ ಉಪ–ಉತ್ಪನ್ನಗಳಾವುವೆಂದರೆ ಹಿಪ್ಪ-ನೇರಳೆ ಕಸುರು, ಹಿಕ್ಕೆ, ಕಾಂಡ, ಹಣ್ಣಾದ ಎಲೆ ಗಳು, ಬೇರುಗಳು, ಕೋಶಾವಸ್ಥೆ, ರೇಷ್ಮೆಕಸುಬು, ಗಂಟು ಗೂಡು, ಕೊರೆದ ಗೂಡುಗಳು, ಸ್ಪನ್ ರೇಷ್ಮೆ ಮುಂತಾದವು. ಈ ಉತ್ಪನ್ನಗಳು ವಿವಿಧ ರೀತಿಯಲ್ಲಿ ಮನುಷ್ಯನಿಗೆ ಪ್ರಯೋಜನಕಾರಿಯಾಗಿದ್ದು ಹೆಚ್ಚು ಲಾಭ ಗಳಿಸಲು ಅನುಕೂಲವಾಗುವುದಲ್ಲದೆ ಬೇರೆ ಕೈಗಾರಿಕೆ ಗಳನ್ನು ನಡೆಸಲು ಸಹಕಾರಿಯಾಗಿದೆ. ಈ ಉಪ ಉತ್ಪನ್ನ ಗಳ ಉಪಯೋಗಗಳನ್ನು ಕೆಳಗೆ ತಿಳಿಸಲಾಗಿದೆ.

ಅ) ಉಪಉತ್ಪನ್ನಗಳಿಂದ ಕುರಿ, ಮೇಕೆ ಸಾಕಣೆ

ಹಣ್ಣಾದ ಎಲೆ, ಹಿಪ್ಪ-ನೇರಳೆ ಕಸರು, ಎಳೆಯ ಕಾಂಡ ಮುಂತಾದ ಉಪ-ಉತ್ಪನ್ನಗಳು ಹೆಚ್ಚು ಸಾರ ಜನಕ ಹಾಗೂ ಸಕ್ಕರೆ ಅಂಶಗಳನ್ನು ಹೊಂದಿದ್ದು ಕುರಿ

ಹಾಗೂ ಮೇಕೆಗಳಿಗೆ ಒಳ್ಳೆಯ ಆಹಾರವಾಗಿದೆ, ಇದನ್ನು ತಿಂದ ಕುರಿ ಹಾಗೂ ಮೇಕೆಗಳು ದೃಢವಾಗಿ ಬೆಳೆದು ಮಾನವನಿಗೆ ಆಹಾರವಾಗುತ್ತವೆ. ಕುರಿಗಳ ಮಲಮೂತ್ರ ಹಿಪ್ಪ-ನೇರಳೆಗೆ ಸೂಕ್ತ ಗೊಬ್ಬರವಾಗಿದೆ.

ಆ) ಉಪಉತ್ಪನ್ನಗಳು ಹಾಗೂ ಮೀನುಗಾರಿಕೆ

ರೇಷ್ಮೆಹುಳುವಿನ ಹಿಕ್ಕೆಯೂ, ಮೀನುಗಳಿಗೆ ಒಳ್ಳೆಯ ಆಹಾರವಾಗಿದೆ. ಹಿಕ್ಕೆಯನ್ನು ತಿಂದ ಮೀನುಗಳು ತ್ವರಿತವಾಗಿ ಬೆಳೆದು ಮಾನವನಿಗೆ ಆಹಾರವಾಗುತ್ತವೆ.

ಇ) ಉಪ-ಉತ್ಪನ್ನಗಳು ಹಾಗೂ ಗೊಬ್ಬರ ಅನಿಲ

ರೇಷ್ಮೆಹುಳು ಹಿಕ್ಕೆಯನ್ನು ಗೊಬ್ಬರ ಅನಿಲ ತಯಾರು ಮಾಡಲು ಉಪಯೋಗಕಾರಿಯಾಗಿದ್ದು, ಈ ಹಿಕ್ಕೆಯಿಂದ ಹೆಚ್ಚು ಶಾಖ ಉತ್ಪತ್ತಿಯಾಗುತ್ತದೆ. ಈ ಶಾಖವನ್ನು ಅಡಿಗೆ ಮಾಡಲು ಹಾಗೂ ಮನೆ ದೀಪ ಉರಿಸಲು ಉಪಯೋಗಿಸುತ್ತಾರೆ; ಗೊಬ್ಬರ ಅನಿಲ ಯಂತ್ರದಿಂದ ಹೊರ ಬಂದ ಗೊಬ್ಬರವು ಇನ್ನೂ ಹೆಚ್ಚು ಅಂಶಗಳನ್ನು ಹೊಂದಿದ್ದು ಒಳ್ಳೆಯ ಫಲವತ್ತತೆಯನ್ನು ನೀಡುತ್ತದೆ.

ಈ) ಉಪ-ಉತ್ಪನ್ನಗಳು ಹಾಗೂ ಕೋಳಿ ಸಾಕಾಣಿಕೆ

ಕೋಶಾವಸ್ಥೆ (ಪ್ಯೂಪ)ಯು ನೂಲು ಬಿಚ್ಚಾಣಿಕೆಯ ಮುಖ್ಯ ಉಪ-ಉತ್ಪನ್ನವಾಗಿರುತ್ತದೆ. ಇದನ್ನು ಎಣ್ಣೆ ತಯಾರು ಮಾಡಲು ಉಪಯೋಗಿಸುತ್ತಾರೆ. ಈ ಎಣ್ಣೆ

ಯನ್ನು ಸಾಬೂನು ತಯಾರಿಕೆಗೆ ಉಪಯೋಗಿಸುತ್ತಾರೆ; ಕೋಶಾವಸ್ಥೆಯು ಶೇ. 20ರಷ್ಟು ಎಣ್ಣೆ ಅಂಶವನ್ನು ಹೊಂದಿರುತ್ತದೆ. ಅಲ್ಲದೆ ಶೇ. 50ರಷ್ಟು ಪ್ರೋಟಿನ್ ಮತ್ತು ವಿಟಮಿನ್ ಅಂಶವನ್ನು ಹೊಂದಿದ್ದು ಒಣಗಿಸಿದ ಕೋಶಾವಸ್ಥೆಯನ್ನು ಪುಡಿಮಾಡಿ ಕೋಳಿ ಆಹಾರವಾಗಿ ಮತ್ತು ನಾಯಿ ಬಿಸ್ಕತ್ತುಗಳನ್ನು ತಯಾರು ಮಾಡಲು ಉಪಯೋಗಿಸುತ್ತಾರೆ.

ಗಂಟುಗೂಡು, ಕೊರೆದ ಗೂಡುಗಳು ಮತ್ತು ಲೋಪ ದೋಷ ಗೂಡುಗಳನ್ನು ಉಪಯೋಗಿಸಿಕೊಂಡು ಸ್ಪನ್ ರೇಷ್ಮೆಯನ್ನು ತಯಾರಿಸಿ, ಈ ಸ್ಪನ್ ರೇಷ್ಮೆ ಯನ್ನು ಕಾರ್ಪೆಟ್ ಮತ್ತಿತರ ವಸ್ತುಗಳನ್ನಾಗಿ ಮತ್ತು ಟೈರುಗಳನ್ನು ತಯಾರಿಕೆಗೆ ಉಪಯೋಗಿಸುತ್ತಾರೆ.

ಗ್ರಾಮೀಣ ಜನತೆಗೆ ರೇಷ್ಮೆಕೃಷಿಯಲ್ಲಿ ದೊರೆಯುವ ಸೌಲಭ್ಯಗಳು

ಸಮಗ್ರ ಹಾಗೂ ತ್ವರಿತ ಗ್ರಾಮೀಣಾಭಿವೃದ್ಧಿಗೆ ಕೈಗಾರಿಕೆ ಅಥವಾ ಕೃಷಿಯಾಗಲೀ, ಉತ್ತೇಜನಕಾರಿ ಸೌಲಭ್ಯಗಳು ಅತ್ಯವಶ್ಯಕ. ಹಾಗೆಯೇ ರೇಷ್ಮೆ ಕೃಷಿಯು ಒಂದು ಕೃಷಿಯಾಧಾರಿತ ಗುಡಿಕೈಗಾರಿಕೆಯಾಗಿರುವುರಿಂದ ಉತ್ತೇಜನಕಾರಿ ಸೌಲಭ್ಯಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದೊರಕಿಸಿಕೊಟ್ಟಿವೆ. ಈ ಸೌಲಭ್ಯಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಅವು ಯಾವು ವೆಂದರೆ ಸಾಧನ ಸೌಲಭ್ಯಗಳು ಮತ್ತು ಆರ್ಥಿಕ ಸೌಲಭ್ಯ ಗಳು.

ಸಾಧನ ಸೌಲಭ್ಯಗಳು ಯಾವುವೆಂದರೆ ರೇಷ್ಮೆ ಮೊಟ್ಟೆ ಬಿತ್ತನೆ ಕೋಠಿಗಳು, ಸರ್ಕಾರಿ ರೇಷ್ಮೆಕೃಷಿ ಕ್ಷೇತ್ರಗಳು, ಚಾಕಿ ಸಾಕಾಣಿಕಾ ಕೇಂದ್ರಗಳು, ರೇಷ್ಮೆಗೂಡು ಮಾರುಕಟ್ಟೆಗಳು, ರೇಷ್ಮೆ ವಿನಿಮಯ ಕೇಂದ್ರಗಳು, ನೂಲು ಬಿಚ್ಚುವ ಗಿರಣಿಗಳು, ಸಂಶೋಧನಾ ಕೇಂದ್ರಗಳು, ತರಬೇತಿ ಸಂಸ್ಥೆಗಳು, ವಿಸ್ತರಣಾ ಕೇಂದ್ರಗಳು ಮುಂತಾದವು.

ಆರ್ಥಿಕ ಸೌಲಭ್ಯಗಳು ಯಾವುವೆಂದರೆ, ರೇಷ್ಮೆ ಬೆಳೆಗಾರರಿಗೆ ಸಾಲ ಸೌಲಭ್ಯ, ನೂಲು ಬಿಚ್ಚುವವರಿಗೆ ಸಾಲ ಸೌಲಭ್ಯ, ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ ಧನ, ಬೈವೋಲ್‌ಟೈನ್ ತಳಿಗೆ ವಿಮೆ ಯೋಜನೆ ಮುಂತಾದವು.

ಸಾಧನ ಸೌಲಭ್ಯಗಳು

ರೇಷ್ಮೆ ಬಿತ್ತನೆ ಕೋಠಿಗಳು –

ರೇಷ್ಮೆಕೃಷಿಗೆ ರೇಷ್ಮೆ ಮೊಟ್ಟೆಯೇ "ಬೆನ್ನೆಲುಬು" ರೇಷ್ಮೆಗೂಡಿನ ಗುಣ ಮತ್ತು ಪ್ರಮಾಣ (ಇಳುವರಿ) ನೇರವಾಗಿ ಮೊಟ್ಟೆಯ ಆರೋಗ್ಯದ ಮೇಲೆ ಅವಲಂಬಿತ ವಾಗಿರುತ್ತದೆ. ಆದ್ದರಿಂದ ರೋಗ ರಹಿತ ಮುಖ್ಯವಾಗಿ ಗಂಟುರೋಗ ರಹಿತ ಮೊಟ್ಟೆ ಉತ್ಪಾದಿಸುವುದು ಮುಖ್ಯ ಗುರಿಯಾಗಿರುವುದರಿಂದ ರೇಷ್ಮೆ ಬಿತ್ತನೆ ಕೋಠಿಗಳನ್ನು ಸ್ಥಾಪಿಸಲಾಗಿದೆ. ಮೊಟ್ಟ ಮೊದಲಿಗೆ ರೇಷ್ಮೆ ಬಿತ್ತನೆ ಕೋಠಿಯನ್ನು ಚನ್ನಪಟ್ಟಣದ ಸರ್ಕಾರಿ ರೇಷ್ಮೆಕೃಷಿ ಕ್ಷೇತ್ರದಲ್ಲಿ 1914ರಲ್ಲಿ ಸ್ಥಾಪಿಸಲಾಯಿತು. ನಂತರ ರಾಜ್ಯದ ಹಲವು ಕಡೆ ಮಾದರಿ ರೇಷ್ಮೆ ಬಿತ್ತನೆ ಕೋಠಿಗಳು ಹಾಗೂ ಸರ್ಕಾರಿ ರೇಷ್ಮೆ ಬಿತ್ತನೆ

ಕೋಠಿಗಳನ್ನು ಸ್ಥಾಪಿಸಲಾಗಿದೆ. ಇಲ್ಲಿ ವೈಜ್ಞಾನಿಕ ರೀತಿಯಲ್ಲಿ ಮೊಟ್ಟೆಯನ್ನು ಉತ್ಪಾದಿಸಿ ಹಂಚಲಾಗುತ್ತದೆ. ಈ ಕೇಂದ್ರಗಳಲ್ಲಿ ಮೊಟ್ಟೆ ಉತ್ಪಾದನೆಗೆ ಬೇಕಾಗುವ ಸೌಲಭ್ಯಗಳು ದೊರೆಯುತ್ತದೆ. ಈ ಕೋಠಿಗಳಲ್ಲಿ ರೇಷ್ಮೆ ತಾಯಿ ಚಿಟ್ಟೆಯನ್ನು ಗಂಟುರೋಗ ಪರೀಕ್ಷೆಗೆ ಒಳಪಡಿಸಲಾಗುತ್ತದೆ.

ಇವುಗಳಲ್ಲದೆ ರೇಷ್ಮೆ ಮೊಟ್ಟೆ ಉತ್ಪಾದನೆ ಮಾಡಲು ಖಾಸಗಿಯವರಿಗೆ ಸೌಲಭ್ಯ ಕಲ್ಪಿಸಿಕೊಡಲಾಗಿದೆ. ಈ ಮೊಟ್ಟೆ ಉತ್ಪಾದಿಸುವ ಖಾಸಗಿಯವರು ಸನದು ಪತ್ರವನ್ನು ಹೊಂದಿರಬೇಕು. ಇವರನ್ನು "ಸನದು ಮೊಟ್ಟೆ ತಯಾರಕರು" (ಎಲ್.ಎಸ್.ಪಿ.) ಎಂದು ಕರೆಯುತ್ತಾರೆ.

ರಾಷ್ಟ್ರೀಯ ರೇಷ್ಮೆಬಿತ್ತನೆ ಯೋಜನೆ (ಎನ್.ಎಸ್.ಎಸ್.ಪಿ.)

ಕೇಂದ್ರ ರೇಷ್ಮೆ ಮಂಡಳಿಯು ರಾಷ್ಟ್ರೀಯ ರೇಷ್ಮೆ ಬಿತ್ತನೆ ಯೋಜನೆಯಡಿ ಹಲವು ರಾಷ್ಟ್ರೀಯ ರೇಷ್ಮೆಮೊಟ್ಟೆ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಿದೆ. ಪ್ರತಿಯೊಂದು ಉತ್ಪಾದನಾ ಕೇಂದ್ರವು ಸುಮಾರು 5 ಲಕ್ಷ ದ್ವಿತಳಿ ಮತ್ತು 5 ಲಕ್ಷ ಮಿಶ್ರತಳಿ ಮೊಟ್ಟೆಯನ್ನು ತಯಾರಿಸುವ ಶಕ್ತಿ ಹೊಂದಿದೆ. ಇವುಗಳು ರಾಜ್ಯದ ರೇಷ್ಮೆ ಬೆಳೆಗಾರರ ಬೇಡಿಕೆಯನ್ನು ಪೂರೈಸಲು ಸಹಾಯಕವಾಗಿವೆ.

ಸರ್ಕಾರಿ ರೇಷ್ಮೆಕೃಷಿ ಕ್ಷೇತ್ರಗಳು

ರಾಜ್ಯದ ಹಲವಾರು ಕಡೆ ಸರ್ಕಾರಿ ರೇಷ್ಮೆಕೃಷಿ ಕ್ಷೇತ್ರಗಳನ್ನು ಸ್ಥಾಪಿಸಲಾಗಿದೆ. ಈ ಕ್ಷೇತ್ರಗಳ ಮುಖ್ಯ

ಉದ್ದೇಶವೇನೆಂದರೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹಿಪ್ಪುನೇರಳೆ ಬೇಸಾಯ ಮತ್ತು ರೇಷ್ಮೆಹುಳು ಸಾಕಾಣಿಕೆಯನ್ನು ಮಾಡುವುದು. ಇದರ ಪ್ರಯೋಜನವೇನೆಂದರೆ ಸುತ್ತಮುತ್ತಲ ರೈತರು ತಂತ್ರ ಜ್ಞಾನದ ಬಗ್ಗೆ ಪ್ರಾಯೋಗಿಕ ತಿಳುವಳಿಕೆ ಪಡೆದು ಅವರೂ ಸಹ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಕೊಂಡು ಹಿಪ್ಪುನೇರಳೆ ಬೇಸಾಯ ಮತ್ತು ರೇಷ್ಮೆಹುಳು ಸಾಕಾಣಿಕೆಯನ್ನು ಮಾಡಿ ಉತ್ತಮ ಇಳುವರಿ ಮತ್ತು ಗುಣಮಟ್ಟದ ಗೂಡುಗಳನ್ನು ಉತ್ಪಾದಿಸಬಹುದು.

ಚಾಕಿ ಸಾಕಾಣಿಕಾ ಕೇಂದ್ರಗಳು

ಚಾಕಿ ಹುಳು ತುಂಬಾ ಸೂಕ್ಷ್ಮವಾಗಿದ್ದು ಹಲವಾರು ರೋಗಗಳಿಗೆ ಸುಲಭವಾಗಿ ತುತ್ತಾಗುತ್ತವೆ. ಆದ್ದರಿಂದ ಈ ಚಾಕಿ ಹುಳುಗಳನ್ನು ತುಂಬಾ ಕಾಳಜಿಯಿಂದ ಸಾಕಾಣಿಕೆ ಮಾಡಬೇಕು. ಇದಕ್ಕೋಸ್ಕರ ಚಾಕಿ ಸಾಕಾಣಿಕಾ ಕೇಂದ್ರ ಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳಲ್ಲಿ ಹೊಸ ವೈಜ್ಞಾನಿಕ ತಾಂತ್ರಿಕತೆಯನ್ನು ಅಳವಡಿಸಿ ಚಾಕಿಸಾಕಾಣಿಕೆ ಯನ್ನು ಮಾಡಲಾಗುತ್ತದೆ. ಮೊದಲೆ ಹೇಳಿದ ಹಾಗೆ ಗ್ರಾಮೀಣ ಜನತೆಯು ಕಸುಬಾಗಿರುವ ರೇಷ್ಮೆಕೃಷಿಯನ್ನು ತಮ್ಮ ಸ್ವಂತ ಮನೆಗಳಲ್ಲಿ ಹುಳು ಸಾಕಾಣಿಕೆ ಮಾಡುತ್ತಾರೆ. ಈ ರೈತರು ಬಡವರಾಗಿರುವುದರಿಂದ ಪ್ರತ್ಯೇಕ ಸಾಕಾಣಿಕೆ ಮನೆಗಳನ್ನು ಮತ್ತು ತಿಳುವಳಿಕೆ ಹೊಂದಿರುವುದಿಲ್ಲ. ಆದ್ದರಿಂದ ಸರ್ಕಾರವು ಚಾಕಿ ಸಾಕಾಣಿಕಾ ಕೇಂದ್ರಗಳನ್ನು ತೆರೆದಿದೆ. ಈ ಕೇಂದ್ರಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಸಾಕಾಣಿಕೆ ಮಾಡಿ ನಂತರ ರೈತರಿಗೆ ಹಂಚಲಾಗುತ್ತದೆ. ಇದಲ್ಲದೆ ವೈಜ್ಞಾನಿಕ ರೀತಿಯಲ್ಲಿ ಚಾಕಿ ಸಾಕಾಣಿಕೆಯನ್ನು

ಮಾಡುವುದು ಹೇಗೆ ಎಂಬುದರಬಗ್ಗೆ ರೈತರಿಗೆ ತಿಳುವಳಿಕೆ ನೀಡಲಾಗುತ್ತದೆ. ಈ ರೀತಿ ಪ್ರಯೋಜನ ಪಡೆದ ರೈತರು ತಾವೇ ಸ್ವತಃ ಚಾಕಿ ಸಾಕಣೆ ಕೇಂದ್ರಗಳನ್ನು ಸ್ಥಾಪಿಸಿ ಹುಳು ಸಾಕಣೆಯನ್ನು ಮಾಡಬಹುದಾಗಿರುತ್ತದೆ. ಹೀಗೆ ಮಾದರಿ ಚಾಕಿ ಸಾಕಾಣಿಕೆ ಕೇಂದ್ರಗಳು ಪ್ರಾಯೋಗಿಕ ತರಭೇತಿ ಕೇಂದ್ರಗಳಾಗಿಯೂ ಕೆಲಸ ಮಾಡುತ್ತವೆ.

ಇದಲ್ಲದೆ ಹಲವಾರು ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರಗಳಿಗೆ ಸರ್ಕಾರ ಅನುಮತಿ ನೀಡಿದ್ದು ಆರೋಗ್ಯಕರ ಚಾಕಿ ಸಾಕಣೆ ಮಾಡಲು ರೈತರಿಗೆ ಸಹಾಯಕವಾಗಿವೆ. ಮೊಟ್ಟಮೊದಲಿಗೆ ಚಾಕಿ ಸಾಕಾಣಿಕೆ ಕೇಂದ್ರವನ್ನು ಕೋಲಾರ ಜಿಲ್ಲೆಯ ಕ್ಯಾಲನೂರಿನಲ್ಲಿ 1913 ರಲ್ಲಿ ಪ್ರಾರಂಭಿಸಲಾಯಿತು.

ಸರ್ಕಾರವು ಖಾಸಗೀ ಚಾಕಿ ಸಾಕಾಣಿಕೆ ಕೇಂದ್ರಗಳನ್ನು ತೆರೆಯಲು ಸಹಾಯ ಧನವನ್ನು ನೀಡುತ್ತದೆ. ಈ ಸಹಾಯ ಧನವನ್ನು ಚಾಕಿ ಸಾಕಾಣಿಕೆ ಸೌಲಭ್ಯಗಳನ್ನು ಪಡೆಯಲು ನೀಡುತ್ತಾರೆ. ಇದಕ್ಕಾಗಿ ಮೊದಲ ವರ್ಷ 15,000 ರೂ. ಗಳನ್ನು, ಎರಡನೇ ವರ್ಷ 10,000 ರೂ. ಗಳನ್ನು ಮತ್ತು ಮೂರನೇ ವರ್ಷ 10,000 ರೂಪಾಯಿಗಳನ್ನು ನೀಡಲಾಗುತ್ತದೆ.

ತಾಂತ್ರಿಕ ಸೇವಾ ಕೇಂದ್ರಗಳು

ತಾಂತ್ರಿಕ ಸೇವಾ ಕೇಂದ್ರವು ಒಂದು ವಿಸ್ತರಣಾ ಅಂಗದ ಮುಖ್ಯ "ಆಧಾರ ಸ್ತಂಭ" ಪ್ರತಿಯೊಂದು ತಾಂತ್ರಿಕ ಸೇವಾ ಕೇಂದ್ರವನ್ನು ಒಬ್ಬ ರೇಷ್ಮೆಕೃಷಿ

ವಿಸ್ತರಣಾಧಿಕಾರಿಯು ನೋಡಿಕೊಳ್ಳುತ್ತಾರೆ. ಈ ಒಂದು ಕೇಂದ್ರದಡಿಯಲ್ಲಿ 10 ರಿಂದ 12 ಚಾಕಿ ಸಾಕಾಣಿಕಾ ಕೇಂದ್ರಗಳಿರುತ್ತವೆ. ಪ್ರತಿ 365 ಎಕರೆ ನೀರಾವರಿ ಮತ್ತು 1080 ಎಕರೆ ಮಳೆಯಾಧಾರಿತ ಹಿಪ್ಪುನೇರಳೆ ಪ್ರದೇಶಕ್ಕೆ ಒಂದು ತಾಂತ್ರಿಕ ಸೇವಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಜೀಪು, ಸ್ಪ್ರೇಯರ್, ಬಿ.ಒ.ಡಿ. ಇನ್‌ಕ್ಯುಬೇಟರ್‌ಗಳು, ಸೂಕ್ಷ್ಮದರ್ಶಕ ಯಂತ್ರ ಗಳು ಮತ್ತು ಗಂಟುರೋಗ ಕಂಡುಹಿಡಿಯಲು ಉಪಕರಣ ಗಳ ಸೌಲಭ್ಯವಿರುತ್ತದೆ.

ಈ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಹಿಪ್ಪುನೇರಳೆ ಬೇಸಾಯ ಮತ್ತು ರೇಷ್ಮೆಹುಳು ಸಾಕಾಣಿಕೆಯನ್ನು ಆಧುನಿಕ ರೀತಿಯಲ್ಲಿ ನಡೆಸಲು ಮಾರ್ಗದರ್ಶನ ನೀಡ ಲಾಗುತ್ತದೆ. ರೇಷ್ಮೆ ಬೆಳೆಗಾರರು ಎದುರಿಸುವ ಸಮಸ್ಯೆ ಗಳಿಗೆ ಈ ಕೇಂದ್ರಗಳಲ್ಲಿನ ಪರಿಣಿತರು ಉಚಿತ ತಾಂತ್ರಿಕ ಸಲಹೆ ಕೊಡುತ್ತಾರೆ. ಇವುಗಳ ಜೊತೆಗೆ ಸೋಂಕು ನಿವಾರಕಗಳಾದಂತಹ ಫಾರ್ಮಾಲಿನ್. ಬ್ಲೀಚಿಂಗ್ ಪೌಡರ್, ಸ್ಪಂಜು, ಮೇಣದ ಕಾಗದ ಮತ್ತು ಹುಳು ಸಾಕಾಣಿಕೆ ಉಪಕರಣಗಳನ್ನು ನೀಡಲಾಗುತ್ತದೆ. ಇದಲ್ಲದೆ ಸರ್ಕಾರ ದಿಂದ ದೊರೆಯುವ ಸಹಾಯಧನ, ಪ್ರೋತ್ಸಾಹಧನ ಮತ್ತು ಸಾಲ ಪಡೆಯುವಿಕೆ ಬಗ್ಗೆ ಮಾಹಿತಿ ನೀಡ ಲಾಗುತ್ತದೆ.

ಈ ಸೇವಾ ಕೇಂದ್ರಗಳ ಪ್ರಯೋಜನ ಪಡೆಯಲು ಕೇಂದ್ರಗಳ ತಾಂತ್ರಿಕ ಸೇವಾಧಿಕಾರಿಯನ್ನು ಸಂಪರ್ಕಿಸ ಬೇಕು. ಆಧುನಿಕ ಪದ್ಧತಿಗಳಲ್ಲಿ ರೇಷ್ಮೆ ಬೇಸಾಯವನ್ನು

ಮಾಡುವ ಬಗ್ಗೆ ಸಂಚಾರಿ ಪ್ರದರ್ಶನ ವಾಹನಗಳ ಮೂಲಕ ರೈತರಿಗೆ ತಿಳುವಳಿಕೆ ನೀಡಲಾಗುತ್ತದೆ. ಭಿತ್ತಿ ಪತ್ರಗಳು, ಸಣ್ಣ ಸಂಚಾರಿ ಪ್ರಕಟಣೆಗಳನ್ನು ಹಳ್ಳಿಗಳಲ್ಲಿನ ರೈತರಿಗೆ ಹಂಚಲಾಗುತ್ತದೆ. ಇದಲ್ಲದೆ, ಆಸಕ್ತ ರೈತರು ತರಭೇತಿ ಪಡೆಯಲು ತಾಂತ್ರಿಕ ಸೇವಾಕೇಂದ್ರದ ವಿಸ್ತರಣಾಧಿಕಾರಿಯವರಲ್ಲಿ ಹೆಸರನ್ನು ನೋಂದಾಯಿಸಿ ತರಬೇತಿ ಪಡೆಯಬಹುದು. ಈ ತರಬೇತಿಯನ್ನು ರಾಜ್ಯದ ಕೆಲವು ತರಬೇತಿ ಕೇಂದ್ರಗಳಲ್ಲಿ ನೀಡಲಾಗುವುದು.

ರೇಷ್ಮೆಗೂಡು ಮಾರುಕಟ್ಟೆಗಳು

ರೇಷ್ಮೆ ಬೆಳೆಗಾರರಿಗೆ ಮಧ್ಯವರ್ತಿಗಳಿಂದ ಆಗುತ್ತಿದ್ದ ಅನ್ಯಾಯವನ್ನು ತಡೆಯಲು ಕರ್ನಾಟಕ ಸರ್ಕಾರವು ಹಲವು ವ್ಯವಸ್ಥಿತ ಗೂಡು ಮಾರುಕಟ್ಟೆಗಳನ್ನು ರಾಜ್ಯಾದಂತ ಸ್ಥಾಪಿಸಲಾಯಿತು. ಈ ಮಾರುಕಟ್ಟೆಗಳನ್ನು ಸಿಲ್ಕ್‌ವರ್ಮ್ ಸೀಡ್ ಅಂಡ್ ಕಕೂನ್ ಆಕ್ಟ್ 1959"ರ ಅಚ್ಚುಕಟ್ಟಿನಲ್ಲಿ ಸ್ಥಾಪಿಸಲಾಗಿದೆ. ಇದರ ಪ್ರಕಾರ ಪ್ರತಿಯೊಬ್ಬ ರೇಷ್ಮೆ ಬೆಳೆಗಾರ ತನ್ನ ಗೂಡನ್ನು ಸೂಚಿತ ಗೂಡು ಮಾರುಕಟ್ಟೆಯಲ್ಲಿ ಮಾರಬೇಕು. ಹಾಗೆಯೇ ಪ್ರತಿಯೊಬ್ಬ ನೂಲು ಬಿಚ್ಚಣೆದಾರನು ತನಗೆ ಬೇಕಾದ ಗೂಡುಗಳನ್ನು ಈ ಮಾರುಕಟ್ಟೆಗಳ ಮೂಲಕ ಕೊಂಡುಕೊಳ್ಳಬೇಕು. ಈ ಇಬ್ಬರು ಸನದು ಪುಸ್ತಕವನ್ನು ಹೊಂದಿರಬೇಕು. ಈ ಸನದು ಪುಸ್ತಕವನ್ನು ಸಂಬಂಧಪಟ್ಟ ವಿಸ್ತರಣಾಧಿಕಾರಿಗಳು ನೀಡುತ್ತಾರೆ.

ಈ ವ್ಯವಸ್ಥಿತ ಮಾರುಕಟ್ಟೆಗಳಲ್ಲಿ ಗೂಡುಗಳನ್ನು ಮಾರುಕಟ್ಟೆ ಅಧಿಕಾರಿ ಮುಂದೆ ಹರಾಜು ಮಾಡಿ ಮಾರ

ಲಾಗುವುದು. ವ್ಯವಸ್ಥಿತ ಮಾರುಕಟ್ಟೆಯ ಮುಖ್ಯ ಉದ್ದೇಶಗಳೇನೆಂದರೆ ನ್ಯಾಯಬೆಲೆ, ಸರಿಯಾದ ತೂಕ, ಸ್ಥಳದಲ್ಲಿಯೇ ಹಣ ಸ್ವೀಕಾರ ಮಾಡುವುದು. ಗೂಡು ಮಾರುಕಟ್ಟೆ ಅಧಿಕಾರಿಗಳು ಶೇ. 1 ರಷ್ಟು ಮಾರುಕಟ್ಟೆ ಫೀಯನ್ನು ಮಾರುವವನಿಂದ ಮತ್ತು ಕೊಳ್ಳುವವನಿಂದ ವಸೂಲಿ ಮಾಡುತ್ತಾರೆ. ಈ ಹಣವನ್ನು ಮಾರುಕಟ್ಟೆ ಸೌಲಭ್ಯಗಳಿಗೆ ಉಪಯೋಗಿಸಲಾಗುವುದು.

ರೇಷ್ಮೆ ವಿನಿಮಯ ಕೇಂದ್ರ

ನೂಲು ವಿನಿಮಯದಲ್ಲಿ ನೂಲು ಬಿಚ್ಚಾಣಿಕೆ ದಾರರಿಗೆ ಖೋಟಾ ವ್ಯಾಪಾರಿಗಳಿಂದ ಆಗುವ ಮೋಸ ವನ್ನು ತಡೆಯಲು ವ್ಯವಸ್ಥಿತ ರೇಷ್ಮೆ ವಿನಿಮಯ ಕೇಂದ್ರ ಗಳನ್ನು 1979 ರಲ್ಲಿ ಸ್ಥಾಪಿಸಲಾಯಿತು. ಇದರ ಮುಖ್ಯ ಉದ್ದೇಶಗಳೆಂದರೆ ಸಾರ್ವಜನಿಕ ಮಾರುಕಟ್ಟೆ, ನ್ಯಾಯ ಬೆಲೆ, ಮಧ್ಯವರ್ತಿಗಳಿಂದ ನೂಲು ಬಿಚ್ಚಾಣಿಕೆದಾರರನ್ನು ವಿಮುಕ್ತಿಗೊಳಿಸುವುದು, ಸರಿಯಾದ ತೂಕ, ಅದೇ ದಿನವೇ ಹಣ ಸಂದಾಯ ಮಾಡಿಸುವುದು. ಈ ವಿನಿಮಯ ಕೇಂದ್ರಗಳಲ್ಲಿ ರೇಷ್ಮೆ ನೂಲನ್ನು ಅಧಿಕಾರಿಗಳ ಮುಂದೆ ಹರಾಜು ಮಾಡಲಾಗುವುದು. ಯಾರು ಹೆಚ್ಚು ಬೆಲೆಗೆ ಹರಾಜು ಕೂಗುತ್ತಾರೆಯೋ ಅವರಿಗೆ ರೇಷ್ಮೆಯನ್ನು ಕೊಳ್ಳಲು ಅನುಮತಿ ನೀಡಲಾಗುವುದು. ಇದರ ಜೊತೆಗೆ ನೂಲು ಬಿಚ್ಚಾಣಿಕೆದಾರರಿಗೆ ಸಾಲ ಸೌಲಭ್ಯವನ್ನು ಒದಗಿಸಲಾಗುವುದು. ಈ ಸಾಲಕ್ಕೆ ನೂಲು ಬಿಚ್ಚಾಣಿಕೆ ದಾರರು ತಮ್ಮ ರೇಷ್ಮೆಯನ್ನು ಅಡವಿಟ್ಟು, ರೇಷ್ಮೆ ಬೆಲೆಯ ಶೇ. 75 ರಷ್ಟನ್ನು ಸಾಲ ಪಡೆಯಬಹುದು.

ಇದಕ್ಕೆ ಶೇ. 13.5 ರಷ್ಟು ಬಡ್ಡಿ ಹಾಕಲಾಗುವುದು. ನಂತರ ಶೇ. 7.5 ರಷ್ಟು ಸಬ್ಸಿಡಿ ನೀಡಲಾಗುವುದು. ಇಲ್ಲಿಯೂ ಸಹ ಶೇ. 1 ರಷ್ಟು ಮಾರುಕಟ್ಟೆ ಫೀಯನ್ನು ಮಾರುವವ ಮತ್ತು ಕೊಳ್ಳುವವನಿಂದಲೂ ವಸೂಲು ಮಾಡಲಾಗುವುದು. ರೇಷ್ಮೆ ವಿನಿಮಯ ಕೇಂದ್ರವು ರಾಜ್ಯದಲ್ಲಿ ಎಂಟು ಸಹ ವಿನಿಮಯ ಕೇಂದ್ರಗಳನ್ನು ಹೊಂದಿದೆ.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ

ಈ ಮಾರಾಟ ಮಂಡಳಿಯನ್ನು 1979 ರಲ್ಲಿ ಸ್ಥಾಪಿಸಲಾಯಿತು. ಇದರ ಮುಖ್ಯ ಉದ್ದೇಶ ರೇಷ್ಮೆಗೆ ದೃಢ ಬೆಲೆಯನ್ನು ವರ್ಷವಿಡೀ ಒದಗಿಸುವುದು. ಇದರಿಂದ ಮಾರುವವನಿಗೆ ಮತ್ತು ಕೊಳ್ಳುವವನಿಗೆ ಆಗುವ ನಷ್ಟ ವನ್ನು ತಡೆಯುವುದು. ಈ ಮಂಡಳಿಯ ಅಧಿಕಾರಿಗಳು ರೇಷ್ಮೆ ಬೆಲೆ ತುಂಬಾ ಕಡಿಮೆಯಾದಾಗ ಮಾರುಕಟ್ಟೆ ಪ್ರವೇಶಿಸಿ ರೇಷ್ಮೆಯನ್ನು ಕೊಳ್ಳಲು ಖಾಸಗೀ ರೇಷ್ಮೆ ಕೊಳ್ಳುವವರ ಜೊತೆ ಪಾಲ್ಗೊಳ್ಳುತ್ತಾರೆ ಮತ್ತು ರೇಷ್ಮೆ ಬೆಲೆ ತುಂಬಾ ಏರಿದಾಗ ಕೊಂಡ ರೇಷ್ಮೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಾರೆ. ಈ ಮಂಡಳಿಯು ರೇಷ್ಮೆ ವಿನಿಮಯ ಕೇಂದ್ರಕ್ಕೆ ಬಂದ ರೇಷ್ಮೆಯ ಶೇ. 25 ರಷ್ಟನ್ನು ಹರಾಜು ಮಾಡಿಕೊಳ್ಳಬೇಕು.

ನೂಲು ಬಿಚ್ಚುವ ಗಿರಣಿಗಳು

ಕರ್ನಾಟಕ ರಾಜ್ಯ ಸರ್ಕಾರವು ಕೆಲವು ನೂಲು ಬಿಚ್ಚುವ ಗಿರಣಿಗಳನ್ನು ಸ್ಥಾಪಿಸಿದೆ. ಈ ಗಿರಣಿಗಳನ್ನು ದಾವಣಗೆರೆ ತಾಲ್ಲೂಕಿನ ತೋಳಹುಣ್ಸೆ, ಟಿನರಸೀಪುರ

ಮತ್ತು ಕನಕಪುರಗಳಲ್ಲಿ ಸ್ಥಾಪಿಸಲಾಗಿದೆ. ಈ ಪ್ರದೇಶ ಗಳಲ್ಲಿ ಉತ್ಪಾದನೆಯಾಗುವ ಬೈವೋಲ್ಟೈನ್ ರೇಷ್ಮೆ ಗೂಡುಗಳಿಂದ ನೂಲನ್ನು ಈ ಗಿರಣಿಗಳಲ್ಲಿ ಬಿಚ್ಚಲಾಗು ವುದು. ಕನಕಪುರದಲ್ಲಿ ಮಿಶ್ರತಳಿ ಗೂಡುಗಳಿಂದ ನೂಲು ಬಿಚ್ಚಲಾಗುವುದು. ಹೀಗೆ ಬಿಚ್ಚಿದ ನೂಲಿನಿಂದ ಅಂತರ ರಾಷ್ಟ್ರೀಯ ಗುಣಮಟ್ಟದ ರೇಷ್ಮೆಯನ್ನು ತಯಾರಿಸ ಲಾಗುವುದು.

ತರಬೇತಿ ಕೇಂದ್ರಗಳು

ರೇಷ್ಮೆ ಬೇಸಾಯ ಮಾಡುತ್ತಿರುವವರಿಗೆ ಹಾಗೂ ರೇಷ್ಮೆ ಬೇಸಾಯವನ್ನು ಕೈಗೊಳ್ಳಲು ಆಸಕ್ತಿ ಇರುವವರಿಗೆ, ಹಿಪ್ಪನೇರಳೆ ಬೇಸಾಯ, ಹುಳು ಸಾಕಾ ಣಿಕೆ ಮತ್ತು ನೂಲು ಬಿಚ್ಚುವಿಕೆ ವಿಧಾನಗಳ ಬಗ್ಗೆ ತರಬೇತಿ ನೀಡುವ ಸೌಲಭ್ಯವಿದೆ. ಈ ಉದ್ದೇಶಕ್ಕಾಗಿ ಚನ್ನಪಟ್ಟಣ, ಕುದೇರು ಮತ್ತು ದಾವಣಗೆರೆಯ ತೋಳಹುಣ್ಸೆಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯ ಲಾಗಿದೆ. ರೈತರಿಗೆ ಇಲ್ಲಿ ಒಂದು ತಿಂಗಳ ಅವಧಿಯ ತರಬೇತಿ ನೀಡಲಾಗುತ್ತದೆ. ರೇಷ್ಮೆ ಬೆಳೆಯುವ ವಿಧಾನ ಗಳ ಬಗ್ಗೆ ವೈಜ್ಞಾನಿಕ ಹಾಗೂ ತಾಂತ್ರಿಕ ರೀತಿಯಲ್ಲಿ ತರಬೇತಿ ನೀಡಲಾಗುತ್ತದೆ.

ತರಬೇತಿ ಪಡೆಯುವ ರೈತರಿಗೆ ಪ್ರತಿ ತಿಂಗಳು 150 ರೂ.ಗಳ ತರಬೇತಿ ಭತ್ಯ ಸಹ ನೀಡಲಾಗುತ್ತದೆ. ತರಬೇತಿ ಕಾಲದಲ್ಲಿ ರೈತರು ವಾಸಕ್ಕೆ ವಸತಿ ನಿಲಯ ಗಳಲ್ಲಿ ಸ್ಥಳದ ಅವಕಾಶ ಮಾಡಿಕೊಡಲಾಗುತ್ತದೆ.

ಊಟದ ಖರ್ಚನ್ನು ರೈತರೆ ಭರಿಸಬೇಕು. ಆಸಕ್ತ ರೈತರು ತರಬೇತಿ ಪಡೆಯಲು ಇಚ್ಛಿಸುವವರು ತಮ್ಮ ವ್ಯಾಪ್ತಿಯಲ್ಲಿನ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆಕೃಷಿ ವಿಸ್ತರಣಾಧಿಕಾರಿಯನ್ನು ಸಂಪರ್ಕಿಸಿ, ಹೆಸರನ್ನು ನೊಂದಾಯಿಸಬೇಕು.

ಈ ತರಬೇತಿ ಕೇಂದ್ರಗಳಲ್ಲದೆ ರೈತರಿಗೆ ತಲಘಟ್ಟ ಪುರದ ಕರ್ನಾಟಕ ರೇಷ್ಮೆಕೃಷಿ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ, ಮೈಸೂರಿನಲ್ಲಿರುವ ಕೇಂದ್ರ ರೇಷ್ಮೆ ಮಂಡಳಿಯ ಕೇಂದ್ರಿಯ ರೇಷ್ಮೆಕೃಷಿ ಸಂಶೋಧನೆ ಹಾಗೂ ತರಬೇತಿ ಸಂಸ್ಥೆ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯಗಳಲ್ಲಿ ತರಬೇತಿ ನೀಡಲಾಗುತ್ತದೆ.

ರೇಷ್ಮೆಕೃಷಿ ಸಂಶೋಧನಾ ಕೇಂದ್ರಗಳು

ಹಿಪ್ಪನೇರಳೆ, ರೇಷ್ಮೆ ತಳಿ, ರೇಷ್ಮೆಗೂಡು ಮತ್ತು ರೇಷ್ಮೆಯ ಗುಣಮಟ್ಟ ಹೆಚ್ಚಿಸಲು ನೆರವಾಗುವ ಹೊಸ ಪದ್ಧತಿಗಳನ್ನು ಕಂಡುಹಿಡಿಯಲು ಸಂಶೋಧನಾ ಕೇಂದ್ರಗಳು ಮುಖ್ಯ ಪಾತ್ರ ವಹಿಸುತ್ತವೆ. ಈ ದೃಷ್ಟಿಯಿಂದ ಕೆಲವು ಸಂಶೋಧನೆ ಕೇಂದ್ರಗಳನ್ನು ಕೇಂದ್ರ ರೇಷ್ಮೆ ಮಂಡಳಿ ಮತ್ತು ರಾಜ್ಯ ಸರ್ಕಾರಗಳು ಸ್ಥಾಪಿಸಿವೆ. ಬೆಂಗಳೂರು ಮತ್ತು ಕರ್ನಾಟಕ ಕೃಷಿ ವಿಶ್ವವಿದ್ಯಾಲಯದ ಜೊತೆಗೆ ಬೆಂಗಳೂರು, ಮೈಸೂರು, ಕರ್ನಾಟಕ ವಿಶ್ವ ವಿದ್ಯಾಲಯಗಳು ರೇಷ್ಮೆಕೃಷಿಯಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಸಂಶೋಧನೆ ನಡೆಸುತ್ತಿವೆ. ರಾಜ್ಯ ಸರ್ಕಾರವು ಕರ್ನಾಟಕ ರೇಷ್ಮೆಕೃಷಿ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಯನ್ನು ಬೆಂಗಳೂರಿನ ತಲ

ಘಟ್ಟಪುರದಲ್ಲಿ ಸ್ಥಾಪಿಸಲಾಗಿದೆ. ಕೇಂದ್ರರೇಷ್ಮೆ ಮಂಡಳಿಯ ವತಿಯಲ್ಲಿ ಕೇಂದ್ರಿಯ ರೇಷ್ಮೆಕೃಷಿ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯನ್ನು ರಾಜ್ಯದ ಮೈಸೂರಿನಲ್ಲಿ ಸ್ಥಾಪಿಸಲಾಗಿದೆ.

ಇತ್ತೀಚಿನ ಸಂಶೋಧನೆಯ ಫಲವಾಗಿ ರೇಷ್ಮೆ ಉದ್ಯಮದ ವಿವಿಧ ಅಂಗಗಳಾದ ಹಿಪ್ಪನೇರಳೆ, ಬೇಸಾಯ, ರೇಷ್ಮೆಹುಳು ಸಾಕಾಣಿಕೆ ಮತ್ತು ರೇಷ್ಮೆ ತಂತ್ರ ಜ್ಞಾನಕ್ಕೆ ಸಂಬಂಧಪಟ್ಟಂತೆ ಹಲವಾರು ತಾಂತ್ರಿಕತೆಗಳನ್ನು ಹೊರತಂದಿದೆ. ಅವುಗಳಾವುವೆಂದರೆ.

1) ಹಿಪ್ಪನೇರಳೆ ತೋಟಕ್ಕೆ ಮಣ್ಣು ಪರೀಕ್ಷಾಧಾರಿತ ರಸಗೊಬ್ಬರ ಬಳಕೆ ಹಾಗೂ ಸಂಚಾರಿ ಮಣ್ಣು ಪರೀಕ್ಷಾ ವಾಹನಗಳ ಸೌಲಭ್ಯ.

2) ಹಿಪ್ಪನೇರಳೆಗಾಗಿ ಸಾರಜನಕ ಸ್ಥಿರೀಕರಿಸುವ "ಪ್ರಕೃತಿ" ಜೈವಿಕ ಗೊಬ್ಬರ

3) ಸುಧಾರಿತ ಹಿಪ್ಪುನೇರಳೆ ತಳಿ ಡಿ.ಡಿ. (ಡೆಹರಾಡೂನ್)

4) ಉಷ್ಣ ಪ್ರದೇಶಗಳಲ್ಲಿ ಚಾಕಿ ಹಿಪ್ಪನೇರಳೆ ತೋಟಗಳ ನಿರ್ವಹಣೆ

5) ಕಾಂಡದ ಕ್ಯಾಂಕರ್ ರೋಗ ನಿಯಂತ್ರಣ

6) ಮಾದರಿ ಚಾಕಿ ಸಾಕಾಣಿಕಾ ವಿಧಾನಗಳ ಪೆಟ್ಟಿಗೆ.

7) ಹಿಪ್ಪುನೇರಳೆ ರಂಬೆಗಳಿಂದ ಬಲಿತ ಹುಳುಗಳ ಸಾಕಣೆ ವಿಧಾನ.

8) ರೇಷ್ಮೆ ಮೊಟ್ಟೆಯನ್ನು ಸಾಗಿಸುವ ಪೆಟ್ಟಿಗೆ.

9) ಸಂಸ್ಥೆಯ ಹೊಸ ದ್ವಿಸಂತತಿ ತಳಿಗಳ ವಿಶಿಷ್ಟತೆ ಮತ್ತು ಅವುಗಳ ಸಾಕಾಣಿಕಾ ಪದ್ಧತಿ.

10) ಸೋಂಕುನಿವಾರಣೆ ಮತ್ತು ಸ್ವಚ್ಛತೆಗಾಗಿ ಪಂಪು.

11) ರೇಷ್ಮೆನೂಲು ಬಿಚ್ಚಾಣಿಕೆ ನೀರಿನ ಪರೀಕ್ಷೆ ಮತ್ತು ಸರಿಪಡಿಸುವಿಕೆಯ ತಂತ್ರಜ್ಞಾನ.

12) ರೇಷ್ಮೆನೂಲು ಬಿಚ್ಚಾಣಿಕೆಯಲ್ಲಿ ಡೀನಿಯರ್ ಸೂಚಕ.

13) ಊಜಿ ನೊಣದ ನಿಯಂತ್ರಣ.

ಇದಲ್ಲದೆ ರಾಜ್ಯದ ಹಾಗೂ ಕೇಂದ್ರದ ರೇಷ್ಮೆ ಸಂಶೋಧನ ಸಂಸ್ಥೆಗಳಲ್ಲಿ ತರಬೇತಿ ಕಾರ್ಯಕ್ರಮಗಳು, ರೇಷ್ಮೆಹುಳು ರೋಗ ಪರೀಕ್ಷೆ, ನಿವಾರಣೆ ಹಾಗೂ ಮಣ್ಣು, ಎಲೆಯ ಗುಣಮಟ್ಟ ಪರೀಕ್ಷೆ ಹಾಗೂ ಸೂಕ್ತ ಶಿಫಾರಸ್ಸು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸುತ್ತದೆ. ಇದರ ಜೊತೆಗೆ ಈ ಸಂಸ್ಥೆಗಳು ರೈತರ ಮತ್ತು ನೂಲು ಬಿಚ್ಚಾಣಿಕೆಯ ಅನುಕೂಲತೆಗಾಗಿ ಹಲವಾರು ತಾಂತ್ರಿಕ ಪ್ರಕಟಣೆಗಳನ್ನು ಹೊರತರುತ್ತಿವೆ.

ಆರ್ಥಿಕ ಸೌಲಭ್ಯಗಳು

ಹಲವಾರು ಹಣಕಾಸು ಸಂಸ್ಥೆಗಳು ರೈತರಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಸಾಲಸೌಲಭ್ಯ ನೀಡಲು ಮುಂದೆ ಬಂದಿವೆ. ಈ ಸಾಲವನ್ನು ನೀರಾವರಿ ಪಂಪು

ಸೆಟ್ಟುಗಳಿಗೆ ಮತ್ತು ಇತರ ನೀರಾವರಿ ಸೌಲಭ್ಯ ಪಡೆಯಲು ಸಾಕಾಣಿಕಾ ಮನೆಗಳನ್ನು ಕಟ್ಟಲು ಮತ್ತು ಸಾಕಾಣಿಕಾ ಸಲಕರಣೆಗಳನ್ನು ಕೊಳ್ಳಲು ನೀಡಲಾಗುತ್ತದೆ. ಇದಲ್ಲದೆ ನೂಲು ಬಿಚ್ಚಾಣಿಕೆದಾರರಿಗೆ ನೂಲು ಬಿಚ್ಚುವ ಗಿರಣಿಗಳನ್ನು (ಚರಕಾ, ಮಲ್ಟಿ ಎಂಡ್ ಬೇಸಿನ್) ಅಳವಡಿಸಿಕೊಳ್ಳಲು ಸಾಲ-ಸೌಲಭ್ಯ ನೀಡುತ್ತವೆ. ಖಾಸಗಿ ಸಂಸ್ಥೆಗಳಿಗೆ ಫಿಲೇಚರುಗಳು, ನೇಯ್ಗೆ ಉದ್ಯಮಗಳನ್ನು ಸ್ಥಾಪಿಸಲು, ಮುಂತಾದವುಗಳಿಗೆ ಆರ್ಥಿಕ ಸೌಲಭ್ಯ ಒದಗಿಸಲಾಗುತ್ತದೆ. ಆದರೆ ರೇಷ್ಮೆ ಬೆಳೆಗಾರರಿಗೆ ಮತ್ತು ನೂಲು ಬಿಚ್ಚಾಣಿಕೆದಾರರಿಗೆ ಆರ್ಥಿಕ ಸೌಲಭ್ಯ ಒದಗಿಸುವುದು ಈ ಸಂಸ್ಥೆಗಳ ಮುಖ್ಯ ಗುರಿಯಾಗಿದೆ.

ಅನೇಕ ರಾಷ್ಟ್ರೀಕೃತ ಹಣಕಾಸು ಸಂಸ್ಥೆಗಳು ರೇಷ್ಮೆ ಕೃಷಿಗೆ ಹಣಕಾಸು ಸೌಲಭ್ಯ ನೀಡುತ್ತವೆ. ಅವು ಯಾವುದೆಂದರೆ ರಾಷ್ಟ್ರೀಕೃತ ಬ್ಯಾಂಕುಗಳು, ನಬಾರ್ಡ್ (ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್), ಸಹಕಾರ ಸಂಘಗಳು, ಗ್ರಾಮೀಣ ಬ್ಯಾಂಕುಗಳು, ಜಿಲ್ಲಾ ಸಾಲ ಸೇವಾ ಸಹಕಾರ ಬ್ಯಾಂಕುಗಳು (ಡಿ.ಸಿ.ಸಿ.) ಮತ್ತು ಜನರಲ್ ಇನ್‌ಶ್ಯೂರೆನ್ಸ್ ಕಂಪನಿಗಳು.

ರೇಷ್ಮೆ ಬೆಳೆಗಾರರಿಗೆ ಹಣಕಾಸು ಸೌಲಭ್ಯ ನೀಡುವ ಕೆಲವು ಮುಖ್ಯ ಬ್ಯಾಂಕುಗಳು ಯಾವುವೆಂದರೆ ಕೆನರಾ ಬ್ಯಾಂಕ್, ಭಾರತೀಯ ಸ್ಟೇಟ್ ಬ್ಯಾಂಕ್, ಭಾರತೀಯ ಓವರ್ಸೀಸ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಕಾರ್ಪೊರೇಷನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್,

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ (ಪಿ.ಎಲ್.ಡಿ.), ಡಿ.ಸಿ.ಸಿ. ಬ್ಯಾಂಕ್ ಮತ್ತು ಗ್ರಾಮೀಣ ಬ್ಯಾಂಕ್‌ಗಳು, ರಾಷ್ಟ್ರೀಕೃತ ಬ್ಯಾಂಕ್‌ಗಳು ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುತ್ತವೆ. ಇದಲ್ಲದೆ ಜನರಲ್ ಇನ್‌ಶುರೆನ್ಸ್ ಕಂಪನಿ ಬೈವೋಲ್ಟೈನ್ ಬೆಳೆಯುವ ರೈತರಿಗೆ ವಿಮೆ ಯೋಜನೆಯನ್ನು ದೊರಕಿಸಿಕೊಟ್ಟಿದೆ.

ರೇಷ್ಮೆ ಬೆಳೆಗಾರರಿಗೆ ಆರ್ಥಿಕ ನೆರವು

ರೇಷ್ಮೆ ಬೆಳೆಯುವ ಪ್ರದೇಶಗಳಾದ ಕೋಲಾರ, ಬೆಂಗಳೂರು. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸಾಲ ಕೊಡಲುಗುತ್ತದೆ. ಈ ಸಾಲಗಳು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳಾಗಿರುತ್ತವೆ. ಇವುಗಳನ್ನು ಮೇಲೆ ತಿಳಿಸಿದ ಜಿಲ್ಲೆಗಳ 109 ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘಗಳ ನೆರವಿನಿಂದ ಪಡೆದುಕೊಳ್ಳಬಹುದು. ಈ ಸಾಲ ನಬಾರ್ಡ್ ನೆರವನ್ನು ಹೊಂದಿದೆ. ರೇಷ್ಮೆ ಬೆಳೆಗಾರರು ಮೇಲ್ಕಾಣಿಸಿದ 109 ರೇಷ್ಮೆ ಬೆಳಗಾರರ ಹಾಗೂ ಸೇವಾ ಸಹಕಾರ ಸಂಘಗಳಿಂದ ಈ ಸಾಲದ ನೆರವನ್ನು ಪಡೆಯಬಹುದು. ಇದಕ್ಕೆ ತಮ್ಮ ಕ್ಷೇತ್ರದ ವ್ಯಾಪ್ತಿಗೆ ಸೇರಿದ ರೇಷ್ಮೆ ಕೃಷಿ ವಿಸ್ತರಣಾಧಿಕಾರಿಯನ್ನು ಸಂಪರ್ಕಿಸಬೇಕು.

ಇದೇ ರೀತಿ ರೇಷ್ಮೆ ಬೇಸಾಯವನ್ನು ಹೊಸದಾಗಿ ಆರಂಭಿಸಿರುವ ಚಿತ್ರದುರ್ಗ, ಬಳ್ಳಾರಿ. ರಾಯಚೂರು. ಬಿಜಾಪುರ, ಧಾರವಾಡ, ಗುಲ್ಬರ್ಗ, ಬೀದರ್ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ರೈತರಿಗೆ ಸಾಲದ ನೆರವನ್ನು ಒದಗಿಸಲಾಗುವುದು. ಇದನ್ನು "ಕರ್ನಾಟಕ ರೇಷ್ಮೆ

ಬೇಸಾಯ ಯೋಜನೆ" ಯ ಅಡಿಯಲ್ಲಿ ಪೂರೈಸಲಾಗು ತ್ತದೆ. ಈ ಸಾಲಗಳನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ವಾಣಿಜ್ಯ ಬ್ಯಾಂಕಗಳ ಮೂಲಕ ವಿತರಿಸ ಲಾಗುವುದು. ಈ ಸಹಾಯವನ್ನುಪಡೆಯಲು ಸಂಬಂಧಿಸಿದ ರೇಷ್ಮೆಕೃಷಿ ವಿಸ್ತರಣಾಧಿಕಾರಿಗಳನ್ನು ಸಂಪರ್ಕಿಸಬೇಕು.

ಮೇಲಿನ ಎರಡು ಸಾಲ ಯೋಜನೆಗಳು ಜಾರಿಯಲ್ಲಿ ಇಲ್ಲದ ಜಿಲ್ಲೆಗಳಿಗೆ ಇಂತಹ ಸಹಾಯ ಒದಗಿಸಲು "ನಬಾರ್ಡ್ ಯೋಜನೆ" ಜಾರಿಯಲ್ಲಿದೆ

ರೈತರಿಗೆ ದೊರಕುವ ಸಾಲದ ಪ್ರಮಾಣ

		ರೂ.ಗಳಲ್ಲಿ
1.	ಹಿಪ್ಪುನೇರಳೆ ಬೇಸಾಯ (ಎಕರೆಗೆ)	2.200-00
2.	ಸಲಕರಣೆಗಳು	3,000-00
3.	ಸಾಕಾಣಿಕಾ ಮನೆಗಳ ನಿರ್ಮಾಣಕ್ಕೆ	9,000-00
4.	ಬಾವಿಗಳ ನಿರ್ಮಾಣಕ್ಕೆ	12,500-00
5.	ಬಾವಿಗಳನ್ನು ಆಳವಡಿಸಲು	5,000-00
6.	ನೀರಾವರಿ ಪಂಪುಸೆಟ್ಟುಗಳಿಗೆ	6,000-00
7.	ಬೆಳೆಸಾಲ (ನೀರಾವರಿಗೆ)	1,600-00
8,	ನೂಲು ಬಿಚ್ಚುವಿಕೆ, ಶೆಡ್ ನಿರ್ಮಾಣ, ಯಂತ್ರಗಳು, ಖರ್ಚು ಮತ್ತು ಕಾರ್ಯ ಬಂಡವಾಳ	62,600-00

ನೂಲು ಬಿಚ್ಚುವವರಿಗೆ ಆರ್ಥಿಕ ನೆರವು

ರೇಷ್ಮೆ ಬೇಸಾಯದಲ್ಲಿ ನೂಲು ಬಿಚ್ಚುವವರು ಮುಖ್ಯರಾಗಿದ್ದು ನೂಲು ಬಿಚ್ಚಾಣಿಕೆ ಕೆಲಸವನ್ನು ಸರಿ

ಯಾಗಿ ನಡೆಸಲು ಹಣದ ಸಹಾಯವನ್ನು ಒದಗಿಸಲಾಗುತ್ತದೆ. ಈ ಸಹಾಯವನ್ನು ನೂಲು ಬಿಚ್ಚುವವರಿಗೆ ಸಹಕಾರಿ ಸಂಘಗಳ ಮೂಲಕ ಒದಗಿಸಲಾಗುತ್ತದೆ. ಈ ಸಹಕಾರ ಸಂಘಗಳಿಗೆ ವಾಣಿಜ್ಯ ಬ್ಯಾಂಕುಗಳು ಸಾಲ ಒದಗಿಸುತ್ತವೆ. ಇದಲ್ಲದೆ ಹೊಸದಾಗಿ ರೇಷ್ಮೆ ಬೇಸಾಯ ಕೈಗೊಂಡ ಸ್ಥಳಗಳಲ್ಲಿ ರೇಷ್ಮೆ ಗೂಡನ್ನು ಬೇಯಿಸಿ ಬಿಚ್ಚಲು "ಕಡಾಯಿ"ಗಳನ್ನು ಕೊಳ್ಳಲು ಸಾಲ ಒದಗಿಸಲಾಗುತ್ತದೆ. ಈ ಸ್ಥಳಗಳಲ್ಲಿ ನೂಲು ಬಿಚ್ಚುವಿಕೆಗೆ ರೇಷ್ಮೆ ಇಲಾಖೆ ಸಣ್ಣ ನೂಲು ಬಿಚ್ಚುವ ಕಾರ್ಖಾನೆಗಳನ್ನು ನಡೆಸುತ್ತಿದೆ.

ರೇಷ್ಮೆ ಬೆಳೆಗಾರರಿಗೆ ನೀಡುವ ಪ್ರೋತ್ಸಾಹಗಳು

ದ್ವಿತಳಿ ಸಾಕಾಣಿಕೆ ಮಾಡುವ ರೈತರಿಗೆ ಸರ್ಕಾರವು ಉತ್ತೇಜನ ನೀಡುತ್ತದೆ. ದ್ವಿತಳಿ ಗೂಡುಗಳನ್ನು ಉತ್ಪಾದಿಸಿದ ರೈತರಿಗೆ ಒಂದು ಕೆ.ಜಿ.ಗೆ 5-000 ರೂ.ಗಳನ್ನು ಪ್ರೋತ್ಸಾಹ ಧನವನ್ನಾಗಿ ನೀಡಲಾಗುತ್ತದೆ. ಅದೇ ತಳಿಯ ನೂಲನ್ನು ತೆಗೆದವರಿಗೆ ಒಂದು ಕೆ.ಜಿ.ಗೆ 50-00 ರೂ.ಗಳ ಪ್ರೋತ್ಸಾಹ ಧನ ಸಿಗುತ್ತದೆ. ಈ ಸೌಲಭ್ಯವನ್ನು ಸಂಬಂಧಪಟ್ಟ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯ ಅಧಿಕಾರಿಯಿಂದ ಪಡೆದುಕೊಳ್ಳಬೇಕು.

ದ್ವಿತಳಿಗೆ ವಿಮೆ ಯೋಜನೆ

ದ್ವಿತಳಿ ರೇಷ್ಮೆ ಹುಳು ರೋಗಗಳಿಗೆ ಈಡಾಗುವ ಸಾಧ್ಯತೆ ಹೆಚ್ಚು ಹಾಗೂ ಈ ತಳಿ ಹುಳುಗಳನ್ನು ಸಾಕುವ ರೈತರು ನಷ್ಟಕ್ಕೆ ತುತ್ತಾಗದಂತೆ ತಡೆಯಲು "ವಿಮೆ

ಯೋಜನೆ" ಯೊಂದನ್ನು ಸರ್ಕಾರ ಜಾರಿಗೆ ತಂದಿದೆ. ಇದನ್ನು ದ್ವಿತಳಿ ಬೆಳೆಯುವ ಪ್ರದೇಶಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ದ್ವಿತಳಿಯ ಹುಳುಗಳನ್ನು ಒಂದು ವರ್ಷಕ್ಕೆ ವಿಮೆ ಮಾಡಿಸಲಾಗುತ್ತದೆ. ಈ ವಿಮೆ ಯೋಜನೆಗೆ ಒಳಪಡಿಸಲು 100 ರೋಗ ರಹಿತ ಮೊಟ್ಟೆಗಳನ್ನು ಒಂದು ಘಟಕ ವನ್ನಾಗಿ ಪರಿಗಣಿಸಲಾಗುತ್ತದೆ. ವಿಮೆ ಪರಿಹಾರವನ್ನು ಒಂದನೇ ಜ್ವರಕ್ಕೆ 50 ರೂ.ಗಳು, ಎರಡನೇ ಜ್ವರಕ್ಕೆ 80 ರೂ.ಗಳು, ಮೂರನೇ ಜ್ವರಕ್ಕೆ 120-00 ರೂ.ಗಳು ಮತ್ತು ನಾಲ್ಕನೇ ಜ್ವರಕ್ಕೆ 205 ರೂ.ಗಳಂತೆ ಕೊಡಲಾಗುತ್ತದೆ. ಈ ಪ್ರಯೋಜನ ಪಡೆದುಕೊಳ್ಳಲು ಸಂಬಂಧಪಟ್ಟ ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬೇಕು.

ರೇಷ್ಮೆಕೃಷಿಯಲ್ಲಿ ಮಹಿಳೆಯರಿಗೆ ದೊರಕುವ ಸೌಲಭ್ಯಗಳು

ರೇಷ್ಮೆ ಉದ್ಯಮದಲ್ಲಿ ಮಣ್ಣಿನಿಂದ ಶುರುಮಾಡಿ ರೇಷ್ಮೆ ಉಡುಗೆ ತೊಡುಗೆವರೆಗಿನ ವಿವಿಧ ಹಂತಗಳಲ್ಲಿ ಅಂದರೆ ಹಿಪ್ಪನೇರಳೆ ಕೃಷಿ, ಹುಳು ಸಾಕಣೆ, ನೂಲು ಬಿಚ್ಚಾಣಿಕೆ, ನೂಲು ಹುರಿ ಮಾಡುವಿಕೆ, ನೇಯ್ಗೆ ಮುಂತಾದ ಎಲ್ಲಾ ಹಂತಗಳಲ್ಲೂ ಸಹ ಮಹಿಳೆಯರು ತುಂಬಾ ನೇರವಾಗಿ. ಸಕ್ರಿಯವಾಗಿ ಮಹತ್ವದ ಪಾತ್ರ ವಹಿಸುತ್ತಾರೆ.

ಮಹಿಳೆಯರ ಪಾತ್ರವನ್ನು ಪುನಃ ನೆನಪು ಮಾಡಿ ಕೊಟ್ಟು, ಅವರು ನಿರ್ವಹಿಸುವ ಜವಾಬ್ದಾರಿಗಳ ಮಹತ್ವ

ತಿಳಿಸಿ, ಗುಣಾತ್ಮಕವಾಗಿ ಅವರು ಭಾಗವಹಿಸುವಿಕೆಯನ್ನು ಉತ್ತಮ ಪಡಿಸುವುದು ಮತ್ತು ಒಂದಿಷ್ಟು ಸೌಲಭ್ಯ ಕಲ್ಪಿಸುವುದು ಮಹಿಳಾ ವರ್ಷದ ಮುಖ್ಯ ಹಿನ್ನಲೆಯಾಗಿದ್ದು, ಈ ಕೆಳಗಿನ ಸೌಲಭ್ಯಗಳನ್ನು ಮಹಿಳೆಯರಿಗೆ ಒದಗಿಸಲಾಗಿದೆ.

ಮಹಿಳೆಯರ ಹೆಸರಿನಲ್ಲಿ ಜಮೀನಿದ್ದವರಿಗೆ ಹಿಪ್ಪ ನೇರಳೆ ತೋಟ ಮಾಡಿಸುವ ಗುರಿ ಹಾಕಲಾಗಿದೆ. ರೇಷ್ಮೆ ಉದ್ಯಮಕ್ಕೆ ಹೊಸದಾಗಿ ಕಾಲಿಡುತ್ತಿರುವವರಿಗೆ ಮತ್ತು ಈಗಾಗಲೇ ಈ ಕಸುಬಿನಲ್ಲಿರುವ ಅನುಭವಸ್ತರಿಗೂ ಸೇರಿ ಎರಡು ವಿವಿಧ ತರಬೇತಿ ಕೊಡಲಾಗುತ್ತಿದೆ. ರಾಜ್ಯದ ಎಲ್ಲಾ ರೇಷ್ಮೆ ತರಬೇತಿ ಕೇಂದ್ರಗಳಲ್ಲಿ ಮಹಿಳೆಯರಿಗೆ ತಿಂಗಳಿಗೆ 300–00 ರೂಪಾಯಿ ಶಿಷ್ಯವೇತನ ನೀಡಿ ತರಬೇತಿ ನೀಡಲಾಗುತ್ತಿದೆ. ದೂರದ ಊರುಗಳಿಂದ ಬರುವವರಿಗೆ ಸೌಕರ್ಯಕ್ಕಾಗಿ ವಸತಿ ಸೌಲಭ್ಯ ದೊರಕಿಸಿ ಕೊಡಲಾಗಿದೆ. ಇನ್ನು ಮಹಿಳೆಯರಿಗೆ ಸಂಸಾರದ ಜವಾಬ್ದಾರಿ ಇರುವುದರಿಂದ, ಇವರಿಗೆ ಊರುಗಳಲ್ಲಿ ಹತ್ತು ದಿನದ ತರಬೇತಿ ನೀಡಲಾಗುತ್ತದೆ. ಇದಕ್ಕೆ 150-00 ರೂಪಾಯಿಗಳ ಶಿಷ್ಯವೇತನ ಸಹ ನೀಡುತ್ತಾರೆ. ಪ್ರತಿ ತಾಂತ್ರಿಕ ಸೇವಾಕೇಂದ್ರದ ವ್ಯಾಪ್ತಿಯಲ್ಲಿ ಕನಿಷ್ಟ ಒಂದರಂತೆ ಮಹಿಳೆಯರ ಮಾಲೀಕರ ತೋಟ ಗುರುತಿಸಿ, ಪ್ರದರ್ಶನ ತಾಕುಗಳನ್ನಾಗಿ ಆಯ್ಕೆಮಾಡಿ ಇದಕ್ಕೆ ಅವಶ್ಯಕ ಸೌಲಭ್ಯ, ತೋಟ ನಿರ್ವಹಣೆ ಮತ್ತು ಹುಳುಸಾಕಾಣಿಕೆಗೆ ಬೇಕಾಗುವ ಸಾಮಾಗ್ರಿಗಳನ್ನು ಒದಗಿಸುತ್ತಾರೆ. ಇಲ್ಲಿ ನೋಡಿ ತಿಳಿಯಲೂಬಹುದು ಹಾಗೂ ಸ್ವಲ್ಪ ಮಟ್ಟಿಗೆ ಮಾಡಿ ಕಲಿಯಲೂಬಹುದು.

ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ರೇಷ್ಮೆಕೃಷಿ ಕ್ಷೇತ್ರ ಗುರುತಿಸಿ, ಅಲ್ಲಿ ಒಂದಿಷ್ಟು ಎಕರೆ ಪ್ರದೇಶದ ಹಿಪ್ಪುನೇರಳೆಯನ್ನು ಕಲಿಕೆಗೆ ಅಂತ ಬೇರ್ಪಡಿಸಿದ್ದಾರೆ. ಹುಳು ಸಾಕಣೆಗೆ ಪ್ರತ್ಯೇಕ ಮನೆಗಳು ಕಟ್ಟಿ, ಊಟ ವಸತಿಗಾಗಿ ಸೌಲಭ್ಯ ಕಲ್ಪಿಸಲಾಗಿದೆ. ಇಂತಹ ಪ್ರದರ್ಶನ ಫಾರಂ ಸ್ಥಾಪಿಸುವುದರಿಂದ ಹೆಚ್ಚೇನೂ ದೂರ ಹೋಗದೇ ಆಯಾ ಜಿಲ್ಲೆಯಲ್ಲಿಯೇ ಪ್ರಾಯೋಗಿಕವಾಗಿ ಕಲಿಯ ಬಹುದು.

ಪ್ರತಿ ಎಕರೆ ಹಿಪ್ಪನೇರಳೆ ನಾಟಿಗೆ 3,500–00 ರೂಪಾಯಿ, ಹುಳು ಸಾಕಣೆ ಸಲಕರಣೆಗಳಿಗೆ 6,100-00 ರೂಪಾಯಿ, ಹುಳುಸಾಕಣೆ ಮನೆ ಕಟ್ಟಿಕೊಳ್ಳಲು 30,000–00 ರೂಪಾಯಿ, ಬ್ಯಾಂಕುಗಳ ಮೂಲಕ ಸಾಲ ರೂಪದಲ್ಲಿ ಸಿಗುತ್ತವೆ. ಇದರ ಮೇಲಿನ ಬಡ್ಡಿಯ ಅರ್ಧದಷ್ಟು ಸಹಾಯ ಧನವಾಗಿ ಸಿಗುತ್ತದೆ.

ಮಹಿಳಾ ರೈತರು ಉತ್ತಮ ಬೆಳೆಗಾರರ ಮತ್ತು ಸಂಶೋಧನಾ ಕೇಂದ್ರಗಳಲ್ಲಿ ಅಧ್ಯಯನ ಮಾಡಲು ಪ್ರವಾಸ ಸೌಲಭ್ಯವಿದೆ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕಾರ್ಯಗಾರ ಏರ್ಪಡಿಸಿ ಸಂಶೋ ಧಕರಿಂದ, ವಿಜ್ಞಾನಿಗಳಿಂದ ಹೆಚ್ಚಿನ ತಾಂತ್ರಿಕ ಮಾಹಿತಿ ಪಡೆಯುವ ಸೌಲಭ್ಯವಿದೆ.

ಯಾವುದೇ ಮಾರುಕಟ್ಟೆಯಾಗಲೀ ಮಹಿಳೆಯರು ತರುವ ಗೂಡುಗಳನ್ನು ವಿಶೇಷ ಆದ್ಯತೆ ನೀಡಿ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಶೀಘ್ರ ವಿಲೇವಾರಿ, ಶೀಘ್ರ ಹಣ ಪಾವತಿ. ಪ್ರತ್ಯೇಕವಾದ ವಿಶ್ರಾಂತಿ

ಗೃಹದ ವ್ಯವಸ್ಥೆ ಮಾಡಲಾಗಿದೆ. ಮಹಿಳೆಯರ ಮಾಲಿ ಕತ್ವದಲ್ಲಿ ಬೆಳೆದ ಗೂಡುಗಳನ್ನು ಮಹಿಳೆಯರೇ ಮಾರು ಕಟ್ಟೆಗೆ ತಂದು ಮಾರಾಟ ಮಾಡಿದಾಗ, ಪ್ರತಿ ಕಿಲೋ ಗ್ರಾಂ ಗೂಡಿಗೆ 5-00 ರೂಪಾಯಿಗಳ ಪ್ರೋತ್ಸಾಹ ಧನಸೌಲಭ್ಯ ಇದೆ.

ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳಲ್ಲಿ ಮೂರು ತಿಂಗಳ ಕಾಲ ಶಿಷ್ಯವೇತನ ಸಹಿತ ರೇಷ್ಮೆನೂಲು ಬಿಚ್ಚಾಣಿಕೆ ತರಬೇತಿ ವ್ಯವಸ್ಥೆ ಇದೆ. ಗೂಡು ಖರೀದಿ, ಉಬ್ಬೆ ಕೊಡುವುದು, ಆರಿಸುವುದು, ಬೇಯಿಸುವುದು, ನೂಲು ಬಿಚ್ಚುವುದು, ಪುನಃ ಸುತ್ತುವುದು, ಲಡಿ ಮಾಡುವುದು ಮುಂತಾದ ಕಾರ್ಯಗಳನ್ನು ಮಾಡಿ ಕಲಿಯುವ ಸೌಲಭ್ಯ ಇದೆ.

ತರಬೇತಿ ಆದ ನಂತರ ಸ್ವಂತ ನೂಲು ಬಿಚ್ಚಾಣಿಕೆ ಘಟಕಗಳನ್ನು ತೆರೆಯಲಿಕ್ಕೆ ಬ್ಯಾಂಕುಗಳ ಮೂಲಕ ಮತ್ತು ರಾಜ್ಯ ಹಣಕಾಸು ನಿಗಮದ ಮೂಲಕ ಸಾಲ ಪಡೆಯ ಬಹುದು. ಅದಕ್ಕೆ ಬೇಕಾಗುವ ದಾಖಲಾತಿಗಳನ್ನು ಒದಗಿಸಬೇಕು. ಎರಡು ಚರಕಗಳ ಘಟಕಕ್ಕೆ 20,000-00 ರೂಪಾಯಿಗಳ ಸಾಲ ನೀಡುತ್ತಿದ್ದು ಅದರಲ್ಲಿ ಯಂತ್ರೋ ಪಕರಣದ ಭಾಗ 4,000-00 ರೂಪಾಯಿಗಳು. ಇದರಲ್ಲಿ ಶೇಕಡ 25 ರಿಂದ 50 ರವರೆಗೆ ಸಹಾಯಧನ ಇದೆ. ಕಾಟೇಜ್‌ಬೇಸಿನ್‌ನ ಯಂತ್ರೋಪಕರಣ ವೆಚ್ಚ 60,000 ರೂಪಾಯಿಗಳಿಗೂ ಸಹ ಶೇ. 25 ರಿಂದ 50 ರಷ್ಟು ಸಹಾಯಧನ ಇದೆ.

ಮಹಿಳಾ ಉದ್ಯಮಿಗಳು ಉತ್ಪಾದಿಸಿದ ರೇಷ್ಮೆಗೆ ಪ್ರತಿ ಕಿಲೋಗೆ 10 ರೂಪಾಯಿ ಪ್ರೋತ್ಸಾಹ ಧನ ಇದೆ. ಹೊಸ ಪ್ರದೇಶಗಳಲ್ಲಿನ ಉದ್ಯಮಿಗಳಿಗೆ ಪ್ರತಿ ಕಿಲೋ ರೇಷ್ಮೆಗೆ 50-00 ರೂಗಳಂತೆ ಪ್ರೋತ್ಸಾಹಧನ ಮೂರು ವರ್ಷಗಳ ಕಾಲ ಸಿಗುತ್ತದೆ.

ಮಹಿಳೆಯರು ರೇಷ್ಮೆಕೃಷಿ ಪ್ರಾರಂಭಿಸಿದ ಹೊಸದರಲ್ಲಿ ಕೆಲಸದಲ್ಲಿ ನೈಪುಣ್ಯತೆ ಪಡೆಯಲು ಕುಶಲ ಕೆಲಸಗಾರರ ಸಹಾಯ ಪಡೆಯುವುದಕ್ಕೆ ಒಂದು ವರ್ಷ ಕಾಲ 700-00 ರೂಗಳಿಂದ 1,000–00 ರೂಗಳವರೆಗೆ ಗೌರವ ಧನ ಕೊಟ್ಟು ಈ ಸೌಲಭ್ಯ ಒದಗಿಸಲಾಗಿದೆ.

ಕೆಳಮಟ್ಟದ, ಕೊರೆದ ಮತ್ತು ಕತ್ತರಿಸಿದಂತಹ ಗೂಡುಗಳಿಂದ ದಪ್ಪನಾದ ಸ್ಪನ್ ರೇಷ್ಮೆ ತೆಗೆಯಬಹುದು. ತಲಘಟ್ಟಪುರದಲ್ಲಿರುವ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯವರು "ಮೆಡಿಲೇರಿ ಚರಕಾ" ಸಿದ್ಧಪಡಿಸಿದ್ದಾರೆ. ಒಂದು ಚರಕಾಕ್ಕೆ 1,200-00 ರೂಗಳ ಬೆಲೆ ನಿಗದಿಪಡಿಸಲಾಗಿದೆ. ಸ್ಪನ್ ರೇಷ್ಮೆ ಉತ್ಪಾದನೆಯಲ್ಲಿ ತೊಡುಗುವವರಿಗೆ ತರಬೇತಿ ಸೌಲಭ್ಯ, ಚರಕ ಮತ್ತು ಗೂಡಿನ ವೆಚ್ಚದ ಅರ್ಧದಷ್ಟು ಸಹಾಯ ಧನ ಸಿಗುತ್ತದೆ. ಇದೇ ತರಹ ಪಶ್ಚಿಮ ಬಂಗಾಳದಲ್ಲಿ "ಮಟ್ಕಾ ರೇಷ್ಮೆ" ಪ್ರಸಿದ್ಧವಾಗಿದೆ. ಇದರ ಬಗ್ಗೆ ತಿಳಿಯಲು ಮಹಿಳೆಯರಿಗೆ ಆ ರಾಜ್ಯಕ್ಕೆ ಪ್ರವಾಸ ಸೌಲಭ್ಯ ಕಲ್ಪಿಸಲಾಗಿದೆ.

ಕರಕುಶಲ ವಸ್ತುಗಳ ಉತ್ಪಾದನೆಯಲ್ಲಿ ತೊಡುಗುವವರಿಗೆ ತರಬೇತಿಯನ್ನು ಚನ್ನಪಟ್ಟಣದ ತರಬೇತಿ

ಶಾಲೆಯಲ್ಲಿ ಒದಗಿಸಿದೆ. ತರಬೇತಿ ಪಡೆದ ಮಹಿಳೆಯರು ಕರಕುಶಲ ವಸ್ತುಗಳಾದಂತಹ ಹೂ-ಹಾರಗಳು, ಹೂ ಗುಚ್ಛಗಳು, ಗ್ರೀಟಿಂಗ್ ಕಾರ್ಡ್ ಉತ್ಪಾದನೆಗೆ ತೊಡಗಿದರೆ ಪ್ರಾರಂಭಿಕ ಯೋಜನಾ ವೆಚ್ಚದ ಅರ್ಧದಷ್ಟು ಸಹಾಯ ಧನ ಸಿಗುತ್ತದೆ. ಇದಲ್ಲದೆ ರೇಷ್ಮೆ ಉದ್ಯಮಕ್ಕೆ ಸಂಬಂಧ ಪಟ್ಟಂತೆ ಮಹಿಳಾ ಮಂಡಳಿಗಳು ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಸೌಲಭ್ಯ ನೀಡಲಾಗಿದೆ.

ರೇಷ್ಮೆಹುಳು ಸಾಕಣೆಗೆ ಬೇಕಾಗುವಂತಹ ಸಲ ಕರಣೆಗಳನ್ನು ಬಾಡಿಗೆಗೆ ಒದಗಿಸುವುದು, ರಾಸಾಯನಿಕ ಗಳು, ಸಲಕರಣೆಗಳ ಮಾರಾಟ, ಉತ್ಪಾದನೆ, ಮಾರಾಟ ಸೌಲಭ್ಯಗಳ ಬಗ್ಗೆ ತರಬೇತಿ, ಸಾಮೂಹಿಕ ರೇಷ್ಮೆಹುಳು ಸಾಕಣಿಕೆ, ಚಾಕಿ ಸಾಕಣಿಕೆ, ನೂಲು ಬಿಚ್ಚಾಣಿಕೆ, ಹುರಿ ಮಾಡುವಿಕೆ ಇತ್ಯಾದಿ ಎಲ್ಲಾ ಚಟುವಟಿಕೆಗಳಿಗೂ ಸಹ ಯೋಜನಾ ವೆಚ್ಚದ ಶೇ. 75 ರಷ್ಟು ಅನುದಾನ ಕೊಡುವ ಸೌಲಭ್ಯ ಇದೆ.

ಈ ಮೇಲಿನ ಎಲ್ಲಾ ವಿಷಯಗಳನ್ನು ತುಲನೆ ಮಾಡಿದಾಗ ನಮಗನ್ನಿಸುವುದೇನೆಂದರೆ. ನಮ್ಮ ದೇಶವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದ್ದಾಗ್ಯೂ ಬಡತನ ರೇಖೆಯಿಂದ ಕೆಳಗೆ ವಾಸಿಸುತ್ತಿರುವ ಅರ್ಧ ದಷ್ಟು ಜನತೆಗೆ ಕೊಳ್ಳುವ ಸಾಮರ್ಥ್ಯವಿಲ್ಲದಿರುವುದು ಶೋಚನೀಯ ಸಂಗತಿ. ಆದ್ದರಿಂದ ಈ ಸ್ವಾವಲಂಬನೆ ಸಾಧಿಸಲು ವಾಣಿಜ್ಯ ಬೆಳೆಯಾದ ರೇಷ್ಮೆ ಕೃಷಿಯು ಒಂದು ಒಳ್ಳೆಯ ಉದ್ಯಮವಾಗಿದ್ದು, ಉತ್ತಮ

ಹಿಪ್ಪನೇರಳೆ ತಳಿ, ರೇಷ್ಮೆ ಹುಳುವಿನ ತಳಿ, ವೈಜ್ಞಾನಿಕ ತಾಂತ್ರಿಕತೆ ಹಾಗೂ ಮಾರುಕಟ್ಟೆ ಸೌಲಭ್ಯಗಳನ್ನು ಮತ್ತಷ್ಟು ಒದಗಿಸಿದಲ್ಲಿ ರೇಷ್ಮೆ ಕೃಷಿಯು ಗ್ರಾಮೀಣ ಜನತೆಯ "ಬೆನ್ನೆಲುಬು" ಆಗುವುದರಲ್ಲಿ ಸಂದೇಹವಿಲ್ಲ.

ಕರ್ನಾಟಕದ 1993–94ನೇ ಸಾಲಿನ ಅಂಕಿ ಅಂಶಗಳು

1.	ಭೌಗೋಳಿಕ ವಿಸ್ತೀರ್ಣ ಹೆಕ್ಟೇರುಗಳಲ್ಲಿ	1.90,49,836
2.	ಜನಸಂಖ್ಯೆ	4,48,06,468
3.	ಜಿಲ್ಲೆಗಳು	20
4.	ತಾಲ್ಲೂಕುಗಳು	175
5.	ಪಟ್ಟಣ : ನಗರಗಳು	250
6.	ಹೋಬಳಿಗಳು	745
7.	ಹಳ್ಳಿಗಳು	29,386
8.	ಮಳೆ ಮಿ.ಮೀ.	1054
9.	ನೀರಾವರಿ ಮೂಲಗಳು	
	ಅ) ಕಾಲುವೆಗಳು	12,12,430
	ಆ) ಕೆರೆಗಳು	2.98,408
	ಇ) ಬಾವಿಗಳು	5,94,361
	ಈ) ಏತ ನೀರಾವರಿ	1,48,861
	ಉ) ಕೊಳವೆ ಬಾವಿಗಳು	3,21,754
	ಊ) ಇತರೆ	2,12,163
10.	ಬೇಸಾಯ ವಿಸ್ತೀರ್ಣ ಹೆಕ್ಟೇರುಗಳಲ್ಲಿ	1,24,11,702

ಕರ್ನಾಟಕದ ರೇಷ್ಮೆಕೃಷಿ ಅಂಕಿಅಂಶಗಳು

1	ಹಿಪ್ಪನೇರಳೆ ಒಟ್ಟು ವಿಸ್ತೀರ್ಣ ಹೆಕ್ಟೇರ್‌ಗಳು			1,60,835
	ಅ)	ನೀರಾವರಿ ಹೆಕ್ಟೇರ್‌ಗಳು		1,06.336
		1	ಎಂ-5	87,327
		2	ನಾಟಿ ತಳಿ	19,009
	ಆ)	ಮಳೆಯಶಾಧಾರಿತ (ಖುಷ್ಕಿ) (ಹೆಕ್ಟೇರ್‌ಗಳಲ್ಲಿ)		54,499
		1	ಎಂ-5	50,398
		2	ನಾಟಿ ತಳಿ	4,093
2	ಜಿಲ್ಲೆಗಳು			20
3	ತಾಲ್ಲೂಕುಗಳು			173
4	ಹಳ್ಳಿಗಳು			18,021
5	ಕುಟುಂಬಗಳು			3,16,531
6	ಸರ್ಕಾರಿ ರೇಷ್ಮೆಕೃಷಿ ಕ್ಷೇತ್ರಗಳು			95
7	ರೇಷ್ಮೆ ಬಿತ್ತನೆ ಕೋಠಿಗಳು			
	ಅ)	ರಾಜ್ಯ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳು		91
	ಆ)	ರಾಷ್ಟ್ರೀಯ ರೇಷ್ಮೆ ಬಿತ್ತನೆ ಕೇಂದ್ರಗಳು		7

	ಇ) ಸನದು ರೇಷ್ಮೆ ಬಿತ್ತನೆ ಉತ್ಪಾದಕರು (L.S.P.)	972
8	ತಾಂತ್ರಿಕ ಸೇವಾಕೇಂದ್ರಗಳು	246
9	ಬಿತ್ತನೆ ಪ್ರದೇಶದ ತಾಂತ್ರಿಕ ಸೇವಾ ಕೇಂದ್ರಗಳು	21
10	ನೂಲು ಬಿಚ್ಚಾಣಿಕೆ ತಾಂತ್ರಿಕ ಸೇವಾ ಕೇಂದ್ರಗಳು	20
11	ವಿಸ್ತರಣಾ ಚಾಕಿ ಸಾಕಾಣಿಕಾ ಕೇಂದ್ರಗಳು	20
12	ಬುಡಕಟ್ಟು ಜನಾಂಗ ಚಾಕಿ ಸಾಕಾಣಿಕಾ ಕೇಂದ್ರಗಳು	578
13	ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳು	888
14	ಮಾದರಿ ಚಾಕಿ ಸಾಕಾಣಿಕಾ ಕೇಂದ್ರಗಳು	20
15	ಪಶ್ಚಿಮ ಘಟ್ಟ ಚಾಕಿ ಸಾಕಾಣಿಕಾ ಕೇಂದ್ರಗಳು	50
16	ಗೂಡು ಕಟ್ಟುವ ಪಡಸಾಲೆಗಳು	9
17	ರೇಷ್ಮೆ ಗೂಡು ಮಾರುಕಟ್ಟೆಗಳು	64
18	ಸರ್ಕಾರಿ ರೇಷ್ಮೆ ಫಿಲೇಚರುಗಳು	5
19	ಕೆ.ಎಸ್.ಐ.ಸಿ. ಫಿಲೇಚರ್‌ಗಳು	2
20	ಸ್ಪನ್-ಸಿಲ್ಕ್ ಮಿಲ್ಲುಗಳು	5
	ಅ) ಕೆ.ಎಸ್.ಐ.ಸಿ.	1
	ಆ) ಖಾಸಗಿ	4

21	ತರಬೇತಿ : ಉತ್ಪಾದಕ ಕೇಂದ್ರಗಳು		10
22	ನೂಲು ಬಿಚ್ಚಾಣಿಕಾ ಸಂಕೀರ್ಣಗಳು		21
23	ರೇಷ್ಮೆ ಬೆಳೆಗಾರರ ಹಾಗೂ ಸೇವಾ ಸಹಕಾರ ಕೇಂದ್ರಗಳು		109
24	ರೇಷ್ಮೆಕೃಷಿ ತರಬೇತಿ ಕೇಂದ್ರಗಳು		6
25	ರೇಷ್ಮೆ ವಿನಿಮಯ ಕೇದ್ರಗಳು		9
26	ರೇಷ್ಮೆ ಮೊಟ್ಟೆ ಒಟ್ಟು ಉತ್ಪಾದನೆ	(ಲಕ್ಷಗಳಲ್ಲಿ)	1,962.14
	ಅ) ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳು		
	1) ನಾಟಿ ತಳಿ	,,	174.13
	2) ದ್ವಿತಳಿ	,,	66.35
	3) ಮಿಶ್ರತಳಿ	,,	514.47
27	ರಾಷ್ಟ್ರೀಯ ರೇಷ್ಮೆ ಮೊಟ್ಟೆ ಯೋಜನೆ	,,	73.52
	1) ದ್ವಿತಳಿ	,,	6.02
	2) ಮಿಶ್ರತಳಿ	,,	67.52
28	ಸನದುರೇಷ್ಮೆ ಉತ್ಪಾದಕರು ಒಟ್ಟು ಉತ್ಪಾದನೆ	,,	1962.16
	1) ದ್ವಿತಳಿ	,,	72.56
	2) ಮಿಶ್ರತಳಿ	,,	580.96
	3) ನಾಟಿತಳಿ	,,	174.60

29	ರೇಷ್ಮೆಗೂಡು		
	ಒಟ್ಟು ಉತ್ಪಾದನೆ (ಮೆ.ಟನ್ನುಗಳಲ್ಲಿ)		70,208
	1) ದ್ವಿತಳಿ	,,	2,014
	2) ವಿಶ್ರತಳಿ	,,	68,194
30	ಕಚ್ಚಾರೇಷ್ಮೆ ಉತ್ಪಾದನೆ	,,	7,250
31	ದ್ವಿತಳಿ ಬಿತ್ತನೆ ಪ್ರದೇಶ (ಹೆಕ್ಟೇರುಗಳಲ್ಲಿ)		
	1) ತಾಲ್ಲೂಕುಗಳು	,,	35
	2) ಬೆಟ್ಟ ಪ್ರದೇಶ	,,	5,163

[ಮೂಲ : 1993-94ರ ಅಂಕಿ ಅಂಶಗಳು, ರೇಷ್ಮೆ ಇಲಾಖೆ ಕರ್ನಾಟಕ ಸರ್ಕಾರದ ಪ್ರಕಟಣೆ.]

**

ಪ್ರಚಾರೋಪನ್ಯಾಸ ಮಾಲೆಯ ಕೆಲವು ಹೊತ್ತಿಗೆಗಳು

ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶನಗಳು	ಕೆ. ಶೇಷಾದ್ರಿ ಅಯ್ಯಂಗಾರ್
ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
ಅಂತರ್ಜಲ	ಸಿ. ನಾಗಣ್ಣ
ಮಾನವ ನಿರ್ಮಿತ ಧಾತುಗಳು	ಎಸ್. ವೆಂಕಟೇಶಮೂರ್ತಿ
ಕರ್ನಾಟಕ ಅಂತರ್ಜಲ ಸಂಪನ್ಮೂಲಾಭಿವೃದ್ಧಿ	ವೈ. ಲಿಂಗರಾಜು
ಮಾನವನ ಮೇಲೆ ಗ್ರಹಗಳ ಪ್ರಭಾವ ಉಂಟೆ ?	ಎನ್. ಕೆ. ನರಸಿಂಹಮೂರ್ತಿ
ಅನುವಂಶೀಯತೆ ಮತ್ತು ವೈವಿಧ್ಯ	ಎಂ. ಎಸ್. ಎಸ್. ರಾವ್
ದ್ಯುತಿ ವಿದ್ಯುತ್ ಪರಿಣಾಮ	ಕೆ. ನಾಗರಾಜನ್
ಮಾನವ ಮತ್ತು ಪಾಚಿಗಳು	ವಿ. ಎಸ್. ಯಲವಿಗಿ
ಕಪ್ಪು ರಂಧ್ರಗಳು	ವಿ. ಟಿ. ಎಸ್. ಶರ್ಮ
ಮಾನಸಿಕ ಒತ್ತಡಕ್ಕೆ ಇಂದಿನ ಯುವಜನರ ಪ್ರತಿಕ್ರಿಯೆ	ಡಾ॥ ಇಂದಿರಾ ಜೈ ಪ್ರಕಾಶ್
ನಮ್ಮ ಇಂದಿನ ಜಗತ್ತು ಎದುರಿಸುತ್ತಿರುವ ಸಮಸ್ಯೆಗಳು	ಡಾ॥ ಬಿ. ಈಶ್ವರಪ್ಪ
ಗ್ರಾಮೀಣ ಅಭಿವೃದ್ಧಿಯಲ್ಲಿ ಬೆಳವಣಿಗೆ ಕೇಂದ್ರಗಳ ಪಾತ್ರ	ಡಾ॥ ಬಿ. ಎಲ್. ಬಂಡಿ
ಭಾರತದಲ್ಲಿ ಗ್ರಾಹಕರ ಚಳುವಳಿ ಸಮಸ್ಯೆಗಳು ಮತ್ತು ನಿರೀಕ್ಷೆಗಳು	ಎಂ. ಸಿದ್ದಾನಂದ
ರೇಷ್ಮೆ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ	ಡಾ॥ ಹೆಚ್. ಬಿ. ಪುಟ್ಟರಾಜು
ಪ್ರಕೃತಿ ಚಿಕಿತ್ಸೆಯಿಂದ ಆರೋಗ್ಯ	ಡಾ॥ ಹೊ. ಶ್ರೀನಿವಾಸಯ್ಯ
ರಂಗಭೂಮಿ ಮತ್ತು ಜನಜಾಗೃತಿ	ಕೆ. ವಿ. ಚಂದ್ರಣ್ಣಗೌಡ
ಕೌಟಿಲ್ಯನ ಅರ್ಥ ಶಾಸ್ತ್ರದಲ್ಲಿ ರಾಜಕೀಯ ವಿಚಾರಗಳು	ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್
ಭಾಷೆ : ಕೆಲವು ವಿಚಾರಗಳು	ಜಿ. ಅಬ್ದುಲ್ ಬಷೀರ್